# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಭಾನುವಾರ, ನವೆಂಬರ್ 17, 2024

ಸಂಪುಟ : 51 ಸಂಚಿಕೆ : 184 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಹಳೇ ಭಾಗದಲ್ಲಿ ಮಳೆ ನೀರು ಸಮಸ್ಯೆ ಸರಿಪಡಿಸಿ

### ಕುಂದುವಾಡ ಕೆರೆ ಕಾಮಗಾರಿಯಂತೆ ಬಾತಿ ಕೆರೆ ಮಾಡದಿರಿ : ಸಚಿವ ಎಸ್ಸೆಸ್ಸೆಂ ಸೂಚನೆ



ದಾವಣಗೆರೆ, ನ.16- ಗಾಂಧಿನಗರ, ಭಾಷನಗರ ಸೇರಿದಂತೆ ಎಲ್ಲೆಲ್ಲಿ ಮನೆಗಳಿಗೆ ಮಳೆಯ ನೀರಿಂದ ತೊಂದರೆ ಆಗುವುದೊ ಅಲ್ಲಲ್ಲಿ ಮಳೆನೀರು ತಡೆಗಟ್ಟುವ ಕಾರ್ಯಗಳನ್ನು ಮಾಡಿ, ನಗರದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿರಿ ಎಂದು ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಸೂಚಿಸಿದರು.

ನಗರದ ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪಾಧಿಕಾರದಲ್ಲಿ ಇಂದು ಸಂಜೆ ನಡೆದ ದೂಡಾ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಉದ್ಯಾನಗಳನ್ನು ಅಭಿವೃದ್ಧಿ ಹೆಚ್ಚು ಒತ್ತನ್ನು ನೀಡುವಂತೆ ಸೂಚಿಸಿದ ಸಚಿವರು ಕಳಪೆ ಕಾಮಗಾರಿಯಿಂದ ಕುಂದವಾಡ ಕೆರೆ ಅಭಿವೃದ್ಧಿ ವಂಚಿತವಾಗಿದೆ. ಬಾತಿ ಕೆರೆ ಕಾಮಗಾರಿಯನ್ನು ಕುಂದವಾಡ ಕೆರೆ ಕಾಮಗಾರಿಯಂತೆ ಮಾಡದೆ, ಕೆರೆಗೆ ಹೈಟೆಕ್ ಸ್ಪರ್ಶ ನೀಡಿ ಪ್ರವಾಸಿ ತಾಣವನ್ನಾಗಿಸಿ, ಅಲ್ಲದೆ ಪ್ರಾಧಿಕಾರ ವ್ಯಾಪ್ತಿಯ ಕೆರೆಗಳ ಅಭಿವೃದ್ಧಿಯ ಕಡೆ ಗಮನ ಹರಿಸಿ ಎಂದರು.

ಗಾಂಧಿನಗರ ಸಾರ್ವಜನಿಕರ ರುದ್ರಭೂಮಿ ಅವ್ಯವಸ್ಥೆಯಿಂದ ಕೂಡಿದೆ ಎಂದು ಸದಸ್ಯರೊಬ್ಬರು ದೂರಿದ ಹಿನ್ನಲೆಯಲ್ಲಿ ಸಚಿವರು ಮಳೆಯಿಂದ ಆಗುವ ಅನಾಹುತಗಳನ್ನು ತಪ್ಪಿಸಬೇಕು. ಎಸ್.ಎಸ್.ಎಂ ನಗರದಲ್ಲಿನ ಕ್ರೀಡಾಂಗಣದಲ್ಲಿ ಕ್ರೀಡಾಪಟುಗಳಿಗೆ ಅನುಕೂಲವಾಗುವ ರೀತಿಯಲ್ಲಿ ಅಭಿವೃದ್ಧಿ ಕಾರ್ಯಗಳು ತ್ವರಿತಗತಿಯಲ್ಲಿ ಮಾಡಬೇಕು. ದಾವಣಗೆರೆ ಹಾಗೂ ಹರಿಹರ ನಗರದಲ್ಲಿನ ಉದ್ಯಾನಗಳನ್ನು ಅಭಿವೃದ್ಧಿತ್ತ ಕೊಂಡೊಯ್ಯಬೇಕು ಎಂದರು.

ಈ ಸಂದರ್ಭದಲ್ಲಿ ಸಭೆಯ ನಂತರ ಸಚಿವರು ವಿವಿಧ ಬಡಾವಣೆಗಳಿಂದ ಆಗಮಿಸಿದ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿದರು.

ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾಧಿಕಾರಿ ಡಾ.ಗಂಗಾಧರ ಸ್ವಾಮಿ, ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್, ದೂಡಾ ಆಯುಕ್ತರಾದ ಹುಲ್ಲುಮನಿ ತಿಪ್ಪಣ್ಣ, ಪಾಲಿಕೆ ಆಯುಕ್ತರಾದ ರೇಣುಕಾ, ಹರಿಹರ ನಗರಸಭೆ ಆಯುಕ್ತ ಸುಭ್ರಮಣ್ಯ ಶೆಟ್ಟಿ, ಅಧಿಕಾರಿಗಳು ಹಾಗೂ ದೂಡ ಸದಸ್ಯರುಗಳು ಇದ್ದರು.

## ಆಸ್ಪತ್ರೆಯಲ್ಲಿ ಬೆಂಕಿ: 10 ಹಸುಳೆಗಳ ಸಾವು

ನವದೆಹಲಿ, ನ. 16 – ಉತ್ತರ ಪ್ರದೇಶದ ಝಾನ್ಸಿ ಜಿಲ್ಲೆಯ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಸಂಭವಿಸಿದ ಅಗ್ನಿ ಅನಾಹುತದಲ್ಲಿ 10 ನವಜಾತ ಶಿಶುಗಳು ಸಾವನ್ನಪ್ಪಿರುವ ಪ್ರಕರಣವನ್ನು ಉತ್ತರ ಪ್ರದೇಶ (2ನೇ ಪುಟಕ್ಕೆ)


## ಯಲ್ಲಮ್ಮ ಸಿ. ಹಾಲಪ್ಪ ರೆಡ್ಡಿ ನಿಧನ



ದಾವಣಗೆರೆ ಸಿಟಿ, ವಿನಾಯಕ ಬಡಾವಣೆ (ವಿದ್ಯಾನಗರ) 3ನೇ ಕ್ರಾಸ್ ವಾಸಿ ದಿ. ಸಿ. ಹಾಲಪ್ಪ ರೆಡ್ಡಿರವರ ಧರ್ಮಪತ್ನಿ

**ಶ್ರೀಮತಿ ಯಲ್ಲಮ್ಮ (91)**

ರವರು ದಿನಾಂಕ 16.11.2024ರ ಶನಿವಾರ ಮಧ್ಯಾಹ್ನ 12.54ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 17.11.2024ರ ಭಾನುವಾರ ಮಧ್ಯಾಹ್ನ 11.30ಕ್ಕೆ ಮೃತರ ಸ್ವಗ್ರಾಮವಾದ ಹರಿಹರ ತಾಲ್ಲೂಕು, ಬಿಳಸನೂರು ಗ್ರಾಮದ ನಂದಿಗಾವಿ ರಸ್ತೆಯ ಮೃತರ ತೋಟದಲ್ಲಿ ನೆರವೇರಿಸಲಾಗುವುದು.

ಮೃತರ ಪಾರ್ಥಿವ ಶರೀರವನ್ನು ಬೆಳಿಗ್ಗೆ 10 ಗಂಟೆಯವರೆಗೆ ದಾವಣಗೆರೆ ವಿನಾಯಕ ಬಡಾವಣೆ 3ನೇ ಕ್ರಾಸ್‌ನಲ್ಲಿ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುವುದು.

**ದುಃಖತಪ್ತರು : 97390 56255, 94484 22866**







## 40 ಪರ್ಸೆಂಟ್ : ಅಂಬಿಕಾಪತಿ ಆರೋಪ ಸುಳ್ಳೆಂದು ಲೋಕಾಯುಕ್ತ ವರದಿ

ಬೆಂಗಳೂರು, ನ. 16 - ಬಿಜೆಪಿ ಸರ್ಕಾರದ ವಿರುದ್ಧ ಆಗಿನ ರಾಜ್ಯ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷ ಅಂಬಿಕಾಪತಿ ಮಾಡಿದ್ದ 40 ಪರ್ಸೆಂಟ್ ಆರೋಪ ಸುಳ್ಳು ಎಂದು ಲೋಕಾಯುಕ್ತ ತನಿಖೆಯಿಂದ ತಿಳಿದು ಬಂದಿರುವುದಾಗಿ ಮೂಲಗಳು ತಿಳಿಸಿವೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 40 ಪರ್ಸೆಂಟ್ ಕಮೀಷನ್ ಹಣಕ್ಕೆ ಬೇಡಿಕೆ ಇಡಲಾಗಿತ್ತು ಎಂದು ಅಂಬಿಕಾಪತಿ ಅವರು ಆರೋಪ ಮಾಡಿದ್ದರು. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಈ ಆರೋಪ ಮಾಡಲಾಗಿತ್ತು.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಈ ಪ್ರಕರಣವನ್ನು ಲೋಕಾಯುಕ್ತ ತನಿಖೆಗೆ ವಹಿಸಲಾಗಿತ್ತು.

5 ವರ್ಷಗಳ ಹಿಂದಿನ ಅವಧಿಯಲ್ಲಿಯೂ ಸಹ ಅಂಬಿಕಾಪತಿಯವರು ಬಿಬಿಎಂಪಿಯ ಪೂರ್ವ ವಲಯದಲ್ಲಾಗಲೀ ಅಥವಾ ಇತರೆ (2ನೇ ಪುಟಕ್ಕೆ)

## ಮೂವರ ಹತ್ಯೆ : ಮಣಿಪುರ ಸಚಿವರು, ಶಾಸಕರ ಮನೆಗಳಿಗೆ ನುಗ್ಗಿ ಪ್ರತಿಭಟನೆ


ಇಂಫಾಲ್, ನ. 16 – ಮಣಿಪುರದ ಜಿರಿಭಮ್ ಜಿಲ್ಲೆಯಲ್ಲಿ ಹತರಾದ ಮೂವರಿಗೆ ನ್ಯಾಯ ಒದಗಿಸುವಂತೆ ಒತ್ತಾಯಿಸಿ ಇಬ್ಬರು ಸಚಿವರು ಹಾಗೂ ಮೂವರು ಶಾಸಕರ ಮನೆಗಳಿಗೆ ಪ್ರತಿಭಟನಾಕಾರರು ನುಗ್ಗಿದ್ದಾರೆ.

ಶಾಸಕರ ಮನೆಗಳಿಗೆ ಜನರು ನುಗ್ಗಿರುವ ಕಾರಣ, ಈ ಪ್ರದೇಶದಲ್ಲಿ ಇಂಫಾಲ್ ಪಶ್ಚಿಮದ ಅಧಿಕಾರಿಗಳು ನಿಷೇಧಾಜ್ಞೆ ಹೇರಿದ್ದಾರೆ.

ಆರೋಗ್ಯ ಸಚಿವ ಸಪ್ಮ್ ರಂಜನ್, ಗ್ರಾಹಕ ವ್ಯವಹಾರಗಳ ಸಚಿವ ಸುಸಿಂದ್ರೊ ಸಿಂಗ್, ಶಾಸಕರಾದ ಆರ್.ಕೆ. ಇಮೊ, ಸಪಮ್ ನಿಶಿಕಾಂತ ಸಿಂಗ್ ಹಾಗೂ ಲಂಫೆಲ್ ಸನಕೀತೆಲ್ ಮನೆಗಳಿಗೆ ಪ್ರತಿಭಟನಾಕಾರರು ನುಗ್ಗಿದ್ದಾರೆ. ಮಣಿಪುರದ ಜಿರಿಭಮ್ ಜಿಲ್ಲೆಯಲ್ಲಿ ಆರು ಜನರು ಕಾಣೆಯಾಗಿದ್ದರು. ಇವರ ಪೈಕಿ ಮೂವರ ಮೃತದೇಹಗಳು ಜಿರಿ ಹಾಗೂ ಬರಕ್ ನದಿಗಳ ದಂಡೆಯಲ್ಲಿ ಶುಕ್ರವಾರ ರಾತ್ರಿ ಪತ್ತೆಯಾಗಿದ್ದವು.


## ಪುಣ್ಯಸ್ಮರಣೆ

### ಲಿಂ|| ಎಂ.ಜಿ. ಮಹೇಶ್ವರಪ್ಪ



ನೀವು ನಮ್ಮನ್ನಗಲಿ ದಿನಾಂಕ 17.11.2024ಕ್ಕೆ ಎಂಟು ವರ್ಷಗಳಾದವು. ಪ್ರತಿ ಕ್ಷಣವೂ ನಿಮ್ಮ ನೆನಪಿನಲ್ಲಿದ್ದು, ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ

**ಸಹೋದರರು:** ಎಂ.ಜಿ. ಬಸವರಾಜ್, ಎಂ.ಜಿ.ಬಾಬಣ್ಣ

**ಧರ್ಮಪತ್ನಿ :** ಶ್ರೀಮತಿ ಎಂ.ಎಂ. ಲಲಿತಾ ಮತ್ತು ಮಕ್ಕಳು ಹಾಗೂ ಕುಟುಂಬ ವರ್ಗದವರು, ಬಂಧು-ಮಿತ್ರರು.

ಉಮಾ ಟ್ರೇಡರ್ಸ್, ದಾವಣಗೆರೆ,
ಉಮಾ ಟ್ರೇಡಿಂಗ್ ಕಂಪನಿ,
ಉಮಾ ಮಹೇಶ್ವರ ಇಂಡಸ್ಟ್ರೀಸ್
ಹರಿಹರ ರಸ್ತೆ, ದಾವಣಗೆರೆ.



## ಸರ್.ಎಂ. ವಿಶ್ವೇಶ್ವರಯ್ಯ ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘ, ದಾವಣಗೆರೆ



ದಿನಾಂಕ 16.11.2024ರಂದು ಸರ್.ಎಂ. ವಿಶ್ವೇಶ್ವರಯ್ಯ ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘದ ಸರ್ವ ಸದಸ್ಯರು, ಸಭೆ ಸೇರಿ ಪದಾಧಿಕಾರಿಗಳನ್ನು ಈ ಕೆಳಗಿನಂತೆ ಆಯ್ಕೆ ಮಾಡಲಾಯಿತು.

**ಗೌರವ ಅಧ್ಯಕ್ಷರು:** ವಿರೂಪಾಕ್ಷಪ್ಪ

**ಅಧ್ಯಕ್ಷರು:** ಕೆ.ಬಿ. ನಾಗರಾಜ್

**ಕಾರ್ಯಾಧ್ಯಕ್ಷರು:** ತಿಪ್ಪೇಸ್ವಾಮಿ ಜಿ.

**ಉಪಾಧ್ಯಕ್ಷರು:** ಡಿ. ಬಸವರಾಜ್, ರಾಮಾಂಜನೇಯ, ರಮೇಶ್‌ನಾಯ್ಕ್, ಗಂಗಾಧರ ಜಿ.ಟಿ., ಷಣ್ಮುಖಪ್ಪ ಜಿ.ಟಿ., ಶಾಂತಕುಮಾರ್

**ಪ್ರಧಾನ ಕಾರ್ಯದರ್ಶಿ:** ಕೆ.ಜಿ. ಮಂಜುನಾಥ, ಮಹಂತೇಶ್ ಹೆಚ್.

**ಸಹ ಕಾರ್ಯದರ್ಶಿ:** ವೈ. ಶ್ರೀನಿವಾಸ ರೆಡ್ಡಿ, ಶಶಿಕುಮಾರ್ ಬಿ., ಎಸ್.ಟಿ. ಸಂತೋಷ್ ಕುಮಾರ್

**ಖಜಾಂಚಿ:** ರುದ್ರೇಶ್, ಎಸ್.ಪಿ. ರಮೇಶ್, ನಾಗರಾಜ್ (ಕಕ್ಕರಗೊಳ್ಳ)

**: ನಿರ್ದೇಶಕರು :**

♦ ಆರ್. ಮಂಜು, ♦ ಹೆಚ್. ಚಂದ್ರು ♦ ವೈ. ನಾರಾಯಣಪ್ಪ,
♦ ವೈ.ಬಸವರಾಜ್ ♦ ಎಸ್.ಸಿ. ಸಿದ್ದೇಶ್ ♦ ಟಿ. ವೀರಣ್ಣ



## ಹೃದಯಪೂರ್ವಕ ಧನ್ಯವಾದಗಳು

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು
ಜಿಲ್ಲಾ ಶಾಖೆ ದಾವಣಗೆರೆ
ಕಾರ್ಯಕಾರಿ ಸಮಿತಿಯ ನಿರ್ದೇಶಕ
ಸ್ಥಾನದ ಚುನಾವಣೆ 2024-29



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ಇಲಾಖೆ ಹಾಗೂ
ಪಿ.ಎಂ.ಜಿ.ಎಸ್.ವೈ. ಇಲಾಖೆ

ನನ್ನ ಆತ್ಮೀಯ ಅಧಿಕಾರಿಯಾದ
ಶ್ರೀಯುತ ಟಾಟಾ ಶಿವನ್ ಹೆಚ್.
ಕಾರ್ಯಪಾಲಕ ಇಂಜಿನಿಯರ್
ಮತ್ತು ನನ್ನ ಸಿಬ್ಬಂದಿ ಸಹದ್ಯೋಗಿಗಳೇ,

ತಮ್ಮ ಅಮೂಲ್ಯವಾದ ಮತವನ್ನು ನನಗೆ ನೀಡುವುದರ ಮೂಲಕ ನನ್ನ ಗೆಲುವಿಗೆ ಸಹಕರಿಸಿದ ಎಲ್ಲಾ ಅಧಿಕಾರಿ / ಸಿಬ್ಬಂದಿ ವರ್ಗದವರಿಗೆ ಹೃದಯಪೂರ್ವಕ ಧನ್ಯವಾದಗಳು

**ಶ್ರೀ ಮಂಜುನಾಥ ತಡಕನಹಳ್ಳಿ**
ಪಂಚಾಯತ್ ರಾಜ್
ಇಂಜಿನಿಯರಿಂಗ್ ಇಲಾಖೆ

# ಲೆಬನಾನ್‌ನ ಇನ್ನಷ್ಟು ಪ್ರದೇಶಗಳಿಗೆ ನುಗ್ಗಿದ ಇಸ್ರೇಲ್

## ಕದನ ವಿರಾಮಕ್ಕೆ ವಿಶ್ವಸಂಸ್ಥೆ ಪ್ರಯತ್ನ

ಬ್ಯೂರತ್, ನ. 16- ಆರು ವಾರಗಳ ಹಿಂದೆ ಲೆಬನಾನ್ ಮೇಲೆ ದಾಳಿ ಆರಂಭಿಸಿದ್ದ ಇಸ್ರೇಲ್ ಸೈನ್ಯ, ಈಗ ಸಾಕಷ್ಟು ಪ್ರದೇಶಗಳಲ್ಲಿ ಮುನ್ನಡೆ ಗಳಿಸಿದೆ. ಹೆಜ್ಬೊಲ್ಲ ಉಗ್ರರು ತೀವ್ರ ಗುಂಡಿನ ದಾಳಿ ನಡೆಸಿದ ನಂತರ ಸೈನ್ಯ ಹಿಂದೆ ಸರಿದಿದೆ ಎಂದು ಲೆಬನಾನ್ ಸರ್ಕಾರಿ ಮಾಧ್ಯಮಗಳು ತಿಳಿಸಿವೆ.

ದಕ್ಷಿಣ ಲೆಬನಾನ್ ಹಳ್ಳಿಯಾದ ಚಮಾದಲ್ಲಿರುವ ವ್ಯೂಹಾತ್ಮಕವಾಗಿ ಮಹತ್ವ ಪಡೆದಿರುವ ಬೆಟ್ಟವನ್ನು ಇಸ್ರೇಲ್ ಪಡೆಗಳು ವಶಪಡಿಸಿಕೊಂಡಿವೆ. ಇದು ಇಸ್ರೇಲ್ ಗಡಿಯಿಂದ 5 ಕಿ.ಮೀ. ದೂರದಲ್ಲಿದೆ. ನಂತರ ಈ ಬೆಟ್ಟದಿಂದ ಇಸ್ರೇಲ್ ಪಡೆಗಳನ್ನು ಹಿಂದೆ ಸರಿಸಲಾಗಿದೆ ಎಂದು ಸರ್ಕಾರಿ ಮಾಧ್ಯಮ ಹೇಳಿದೆ. ಸೈನ್ಯ ಸೀಮಿತವಾಗಿ ದಕ್ಷಿಣ ಲೆಬನಾನ್‌ನಲ್ಲಿ ಕೆಲವು ಗುರಿಗಳ ಮೇಲೆ ದಾಳಿ ನಡೆಸುತ್ತಿದೆ ಎಂದು ಇಸ್ರೇಲ್ ಸೈನ್ಯ ಹೇಳಿದೆ. ಬ್ಯೂರತ್ ದಖಿ,ಣ ಭಾಗ ಹಾಗೂ ಟೈರ್ ಬಂದರು ನಗರ ಸೇರಿದಂತೆ ಹಲವೆಡೆ ಇಸ್ರೇಲ್ ವೈಮಾನಿಕ ದಾಳಿ ನಡೆಸಿದೆ.

ಬ್ಯೂರತ್‌ನ ದಕ್ಷಿಣ ಎಂಬಲ್ಲಿನ ಹೆಜ್ಬೊಲ್ಲಾ ಬಿಗಿ ಹಿಡಿತದ ತಾಣದ ಮೇಲೆ ದಾಳಿ ನಡೆಸಿರುವುದಾಗಿ ಇಸ್ರೇಲ್ ತಿಳಿಸಿದೆ. ಇಸ್ರೇಲ್ ವಿಮಾನಗಳು ಉಗ್ರವಾದಿ ಸಂಘಟನೆಗಳ ಹಲವು ತಾಣಗಳ ಮೇಲೆ ದಾಳಿ ನಡೆಸಿವೆ. ದಾಳಿಗೆ ಮುಂಚೆ ಇಸ್ರೇಲ್ ನಾಗರಿಕರಿಗೆ ಮುನ್ನೆಚ್ಚರಿಕೆಯನ್ನು ನೀಡುತ್ತಿದೆ.

ಸೆಪ್ಟೆಂಬರ್ ನಂತರ ಹೆಜ್ಬೋಲ್ಲಾ ಉಗ್ರರ ಮೇಲಿನ ದಾಳಿಯನ್ನು ಇಸ್ರೇಲ್ ತೀವ್ರಗೊಳಿಸಿದೆ. ಇಸ್ರೇಲ್ ದಾಳಿಯಲ್ಲಿ ಲೆಬನಾನ್‌ನ 3,400 ಜನರು ಸಾವನ್ನಪ್ಪಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವಾಲಯ ಹೇಳಿದೆ.

ಇಸ್ರೇಲ್ ಜೊತೆ ಕದನ ವಿರಾಮ ಒಪ್ಪಂದಕ್ಕೆ ಬರುವಂತೆ ಹೆಜ್ಬೊಲ್ಲಾಗೆ ಮನವೊಲಿಸಬೇಕು ಎಂದು ಲೆಬನಾನ್ ಉಸ್ತುವಾರಿ ಪ್ರಧಾನ ಮಂತ್ರಿ ಒತ್ತಾಯಿಸಿದ್ದಾರೆ.

ಈ ನಡುವೆ, ಇಸ್ರೇಲ್ ಹಾಗೂ ಹಮಾಸ್ ನಡುವಿನ ಸಂಘರ್ಷವನ್ನು ಅಂತ್ಯಗೊಳಿಸುವ ಬಗ್ಗೆಯೂ ಪ್ರಯತ್ನಗಳು ನಡೆಯುತ್ತಿವೆ. 2023ರಲ್ಲಿ ಇಸ್ರೇಲ್ ಮೇಲೆ ಹಮಾಸ್ ದಾಳಿ ನಡೆಸಿದ ನಂತರ ಸಂಘರ್ಷ ಆರಂಭವಾಗಿತ್ತು.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಕದನ ವಿರಾಮ ಕುರಿತು ನಿರ್ಣಯವೊಂದನ್ನು ರೂಪಿಸುತ್ತಿದೆ. ರಷ್ಯಾ, ಚೀನಾ, ಬ್ರಿಟನ್ ಹಾಗೂ ಫ್ರಾನ್ಸ್ ದೇಶಗಳು ಇದಕ್ಕೆ ಬೆಂಬಲಿಸುವ ಇಲ್ಲವೇ ಗೈರಾಗುವ ಸಾಧ್ಯತೆ ಇದೆ. ಅಮೆರಿಕ ಈ ವಿಷಯದಲ್ಲಿ ಪ್ರಮುಖ ಪಾತ್ರ ವಹಿಸಲಿದೆ.

# ತೂತುಕುಡಿಯ ತಾಮ್ರದ ಘಟಕ ಪುನರಾರಂಭಕ್ಕೆ ಸುಪ್ರೀಂ ನಕಾರ

ನವದೆಹಲಿ, ನ. 16 – ತಮಿಳುನಾಡಿನ ತೂತುಕುಡಿಯಲ್ಲಿರುವ ತಾಮ್ರದ ಘಟಕವನ್ನು ಮುಚ್ಚಿರುವುದರ ವಿರುದ್ಧ ವೇದಾಂತ ಸಮೂಹ ದಾಖಲಿಸಿದ್ದ ಮರು ಪರಿಶೀಲನಾ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

ಕಳೆದ ಫೆಬ್ರವರಿ 29ರಂದು ವೇದಾಂತ ದಾಖಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿತ್ತು. ತೂತುಕುಡಿಯಲ್ಲಿ ಮಾಲಿನ್ಯವಾಗುತ್ತಿದ್ದ ಹಿನ್ನೆಲೆಯಲ್ಲಿ ಮೇ 2108ರದು ವೇದಾಂತ ಘಟಕವನ್ನು ಮುಚ್ಚಲಾಗಿತ್ತು.

ಘಟಕದಿಂದ ಆಗುತ್ತಿದ್ದ ಮಾಲಿನ್ಯ ಹಾಗೂ ಸ್ಥಳೀಯರ ಆರೋಗ್ಯದ ಮೇಲೆ ಆಗುತ್ತಿದ್ದ ಪರಿಣಾಮದ ಹಿನ್ನೆಲೆಯಲ್ಲಿ 2018ರ ಮೇ ತಿಂಗಳಲ್ಲಿ ಘಟಕದ ವಿರುದ್ಧ ಸ್ಥಳೀಯರು ಪ್ರತಿಭಟನೆ ನಡೆಸಿದ್ದರು. ಆಗ ಪೊಲೀಸರು ಗುಂಡು ಹಾರಿಸಿದಾಗ 13 ಜನ ಸಾವನ್ನಪ್ಪಿದ್ದರು.

ಘಟಕದ ಪುನರಾರಂಭಕ್ಕಾಗಿ ವೇದಾಂತ ಸಲ್ಲಿಸಿದ್ದ ಮರು ಪರಿಶೀಲನಾ ಅರ್ಜಿಯನ್ನು ಈಗ ನಿವೃತ್ತರಾಗಿರುವ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ತಳ್ಳಿ ಹಾಕಿದೆ.

# ಹರಪನಹಳ್ಳಿಯಲ್ಲಿ ಅಂತರರಾಷ್ಟ್ರೀಯ ಉರ್ದು ದಿನಾಚರಣೆ



ಹರಪನಹಳ್ಳಿ, ನ.16- ಪಟ್ಟಣದ ಅಂಜುಮನ್ ಶಾದಿ ಮಹಲ್‌ನಲ್ಲಿ ಕರ್ನಾಟಕ ರಾಜ್ಯ ಉರ್ದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಕರ್ನಾಟಕ ರಾಜ್ಯ ಭಾಷಾ ಅಲ್ಪಸಂಖ್ಯಾತರ ಪ್ರಾಥಮಿಕ ಶಾಲೆ ಕನ್ನಡ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಘಟಕ ಇವರ ಸಹಯೋಗದಲ್ಲಿ 'ಅಂತರರಾಷ್ಟ್ರೀಯ ಉರ್ದು ದಿನಾಚರಣೆ ಮತ್ತು ರಾಷ್ಟ್ರೀಯ ಶಿಕ್ಷಣ ದಿನಾಚರಣೆ' ಆಚರಿಸಲಾಯಿತು.

ಪುರಸಭಾ ಅಧ್ಯಕ್ಷರಾದ ಫಾತಿಮಾಬೀ ಶೇಕ್ಷಾವಲಿ ಅವರು ಅನಾಥ ಬಡ ವಿದ್ಯಾರ್ಥಿಗಳಿಗೆ ನೋಟ್ ಬುಕ್ ವಿತರಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ವಿಜಯನಗರ ಜಿಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ ಸಂಗಪ್ಪನವರ್, ಉಪಾಧ್ಯಕ್ಷ ಹೆಚ್.ಕೊಟ್ರೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ ಅಂಜಿನಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಲೇಪಾಕ್ಷಪ್ಪ, ಪುರಸಭಾ ಸದಸ್ಯರಾದ ಡಿ.ಅಬ್ದುಲ್ ರೆಹಮಾನ್, ಲಾಟಿ ದಾದಾಪೀರ್, ಉದ್ದಾರ್ ಗಣೇಶ್, ಶಾಹಿನಾಬೀ, ಜಾಕೀರ್ ಸರ್ಖಾವಸ್, ಅಂಜುಮನ್ ಸಮಿತಿಯ ಮಾಜಿ ಅಧ್ಯಕ್ಷ ಸಿ.ಜಾವೀದ್, ರಾಜ್ಯ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷೆ ಪದ್ಮಲತಾ, ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಸ್.ರಾಮಪ್ಪ, ದೈಹಿಕ ಶಿಕ್ಷಣಾಧಿಕಾರಿ ಷಣ್ಮುಖಪ್ಪ, ಮುಖಂಡರಾದ ದಾದಾ ಖಲಂದರ್, ಬಿ. ರಾಜಶೇಖರ್, ದೇವೇಂದ್ರ ಗೌಡ, ಅರ್ಜುನ್ ಪರಸಪ್ಪ, ಬಿ. ಮಂಜುನಾಥ್ ಸೇರಿದಂತೆ ಇತರರು ಉಪಸ್ಥಿತರಿದ್ದರು

## 20ರಂದು ಹರಿಹರಕ್ಕೆ ನೀರು ಪೂರೈಕೆ ಇಲ್ಲ

ಹರಿಹರ ನ.16 - ಇಲ್ಲಿನ ಕವಲೆತ್ತು ಗ್ರಾಮದ ಹತ್ತಿರವಿರುವ ಜಾಕ್‌ವೆಲ್‌ನಲ್ಲಿ ಹೊಸದಾಗಿ ವಿದ್ಯುತ್ ಟ್ರಾನ್ಸ್‌ಫಾರಂಗೆ ಕೇಬಲ್ ಅಳವಡಿಸುವ ಕಾಮಗಾರಿ ಹಮ್ಮಿಕೊಂಡಿರುವುದರಿಂದ, ಇದೇ ದಿನಾಂಕ 20 ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತಿ ರುವುದರಿಂದ ನಿರಂತರ ಕುಡಿಯುವ ನೀರು ಪೂರೈಕೆ ಇರುವುದಿಲ್ಲ ಎಂದು ಹರಿಹರ ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

# ಭಿಕ್ಷಾವರ್ತಿಮಠರ 'ವಚನ ಸ್ಪಂದನ' ಬಿಡುಗಡೆ



ಹರಿಹರ, ನ. 16- ನಾಳೆ ದಿನಾಂಕ 17 ರ ಭಾನುವಾರ ನಗರದ ಹಿರಿಯ ಸಾಹಿತಿ ಪ್ರೊ. ಎಚ್.ಎ. ಭಿಕ್ಷಾವರ್ತಿಮಠ ರಚಿತ ವಚನ ಸ್ಪಂದನ ಕೃತಿ ಬಿಡುಗಡೆ ಸಮಾರಂಭ ನಡೆಯಲಿದೆ ಎಂದು ಕಾರ್ಮಿಕ ಮುಖಂಡ ಹೆಚ್. ಕೆ. ಕೊಟ್ರಪ್ಪ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ನಗರದ ಕನ್ನಡ ಸಾಹಿತ್ಯ ಪರಿಷತ್ತು, ಪರಸ್ಪರ ಬಳಗ, ಕರ್ನಾಟಕ ಜಾನಪದ ಪರಿಷತ್ತು ಹಾಗೂ ಸಾಹಿತ್ಯ ಸಂಗಮ ಇವರ ಸಹಯೋಗದಲ್ಲಿ ಭಾನುವಾರ ಎಸ್.ಜೆ.ವಿ.ಪಿ. ಶಿಕ್ಷಣ ಮಹಾವಿದ್ಯಾಲಯದ ಪ್ರೊ. ಜಿ. ಎಂ. ಬಸವರಾಜ ಸಭಾಂಗಣದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಸಾಹಿತಿ ಪ್ರೊ. ಸಿ.ವಿ. ಪಾಟೀಲ್ ವಹಿಸುವರು. ಉದ್ಘಾಟನೆಯನ್ನು ತಾಲ್ಲೂಕಿನ ಹೊಳೆಸಿರಿಗೆರೆಯ ಹಿರಿಯ ಮುಖಂಡರ ಎನ್.ಜಿ. ನಾಗನಗೌಡ್ರು ನೆರವೇರಿಸುವರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಡಾ. ಕೆ.ಎಂ. ವೀರೇಶ್ ಕೃತಿ ಬಿಡುಗಡೆ ಮಾಡಲಿದ್ದು, ಕೃತಿ ಕುರಿತು ಸಾಹಿತ್ಯ ವಿಮರ್ಶಕ ಪ್ರೊ. ಲಿಂಗರಾಜ್ ಕಮ್ಮಾರ್ ಮಾತನಾಡುವರು ಮತ್ತು ಕೃತಿ ರಚನೆಕಾರ ಭಿಕ್ಷಾವರ್ತಿಮಠ ಲೇಖಕರ ನುಡಿಗಳನ್ನಾಡುವರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ. ಬಿ. ಪರಮೇಶ್ವರಪ್ಪ, ಅತಿಥಿಗಳಾಗಿ ವಿಶ್ರಾಂತ ಪ್ರಾಂಶುಪಾಲ ಎಸ್. ಎಚ್.ಪ್ಯಾಟಿ, ಹಿರಿಯ ಸಾಹಿತಿ ಜೆ. ಕಲೀಮ್ ಬಾಷಾ, ಹಿರಿಯ ಕಾರ್ಮಿಕ ಮುಖಂಡ ಎಚ್.ಕೆ. ಕೊಟ್ರಪ್ಪ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಸ್.ಎಚ್.ಹೂಗಾರ್, ಹಿರಿಯ ಕ್ರೀಡಾಪಟು ಎಚ್. ನಿಜಗುಣ ಮತ್ತಿತರರು ಭಾಗವಹಿಸಲಿದ್ದಾರೆ.

**ಹರಿಹರದಲ್ಲಿ ಇಂದು**

ಹಿರಿಯ ಕ್ರೀಡಾಪಟು ಹೆಚ್. ನಿಜಗುಣ ಮಾತನಾಡಿ, ಹಾವೇರಿ ಜಿಲ್ಲೆಯಲ್ಲಿ ಜನಿಸಿ ಹರಿಹರದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಕೃಷಿಯನ್ನು ನಡೆಸಿ ಹಲವು ಕವನ ಸಂಕಲನ, ಹನಿಗವನ, ಆಧುನಿಕ ವಚನ, ಹಲವಾರು ಕೃತಿಗಳನ್ನು ರಚಿಸಿ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಭಿಕ್ಷಾವರ್ತಿಮಠ್ ರಚಿಸಿದ 'ವಚನ ಸ್ಪಂದನ' ಕೃತಿ ಬಿಡುಗಡೆ ಕಾರ್ಯಕ್ರಮ ನಾವೆಲ್ಲ ಸೇರಿ ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸುತ್ತಿರುವ ಅಲ್ಪಸೇವೆಯಾಗಿದೆ ಎಂದರು.

ಇದೇ ವೇಳೆ ಸಾಹಿತ್ಯ ಸಂಗಮದ ಅಧ್ಯಕ್ಷ ವಿ.ಬಿ.ಕೊಟ್ರೇಶಪ್ಪ ಮಾತನಾಡಿದರು. ಪತ್ರಿಕಾ ಗೋಷ್ಠಿಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸದಸ್ಯ ಎ.ರಿಯಾಜ್ ಅಹ್ಮದ್, ತಾಲ್ಲೂಕು ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಬಿ.ಬಿ.ರೇವಣ್ಣ ನಾಯಕ್ ಮತ್ತಿತರರು ಉಪಸ್ಥಿತರಿದ್ದರು.

# ಎಕ್ಕೆಗೊಂದಿ : ಲೋಕಕಲ್ಯಾಣಾರ್ಥಕ್ಕಾಗಿ ಹೋಮ, ಗೋಪಾಳ, ಪಡ್ಲಿಗಿ ತುಂಬುವ ಕಾರ್ಯಕ್ರಮ



ಮಲೇಬೆನ್ನೂರು, ನ.16- ಎಕ್ಕೆಗೊಂದಿ ಬಳಿ ಶಿವಮೊಗ್ಗ ರಸ್ತೆಯಲ್ಲಿರುವ ಸಿಂಗದೂರು ಚೌಡೇಶ್ವರಿ ಮತ್ತು ಭೂತನಾಥ ದೇವಸ್ಥಾನದಲ್ಲಿ ಗೋಪಾಳ ಮತ್ತು ಪಡ್ಲಿಗಿ ತುಂಬಿಸುವ ಕಾರ್ಯಕ್ರಮವು ಶನಿವಾರ ಶ್ರದ್ಧಾ-ಭಕ್ತಿಯಿಂದ ನಡೆಯಿತು.

ಈ ಕಾರ್ಯಕ್ರಮದ ಅಂಗವಾಗಿ ಹೋಮ - ಹವನ ಪೂಜೆ ಏರ್ಪಡಿಸಲಾಗಿತ್ತು ಹಾಗೂ ಭೂತನ ಸೇವೆಯನ್ನು ಕಾಲಜ್ಞಾನಿ ಡಾ. ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಮಹಾಮಂಗಳಾರತಿ ಹಾಗೂ ಪೂರ್ಣಾಹುತಿ ಮತ್ತು ಗೋಪಾಳ, ಪಡ್ಲಿಗಿ ತುಬಿಸುವ ಕಾರ್ಯಕ್ರಮ ನಡೆದವು. ದೇವಸ್ಥಾನದ ಸಂಸ್ಥಾಪಕ ಸಂತೋಷ್ ಅವರು, ಲೋಕ ಕಲ್ಯಾಣಾರ್ಥವಾಗಿ ಈ ಪೂಜಾ ಕಾರ್ಯಕ್ರಮ ಏರ್ಪಡಿಸಿದ್ದರು. ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ.ಆನಂದಪ್ಪ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಆರೋಪ ಸುಳ್ಳೆಂದು ಲೋಕಾಯುಕ್ತ ವರದಿ

**(1ನೇ ಪುಟದಿಂದ)** ವಲಯಗಳಲ್ಲಿ ಯಾವುದೇ ಕಾಮಗಾರಿಯ ಗುತ್ತಿಗೆಯನ್ನು ಪಡೆದಿರುವುದಿಲ್ಲ. ಆದ್ದರಿಂದ ಅವರು ಮಾಡಿರುವ ಆರೋಪಗಳು ಸುಳ್ಳು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಈ ಬಗ್ಗೆ ಟ್ವೀಟ್ ಮಾಡಿರುವ ರಾಜ್ಯ ಬಿಜೆಪಿ, ಬಿಬಿಎಂಪಿ ವಲಯದಲ್ಲಿ ಅಂಬಿಕಾಪತಿ ಗುತ್ತಿಗೆ ಕೆಲಸ ಮಾಡಿದ್ದಕ್ಕೆ ಯಾವುದೇ ದಾಖಲೆಗಳಿಲ್ಲ. ಅಂಬಿಕಾಪತಿ ಗುತ್ತಿಗೆ ಕೆಲಸಗಳನ್ನು ಮಾಡದೇ ಆರು ವರ್ಷವಾಗಿತ್ತು ಎಂದು ಹೇಳಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸುಳ್ಳುಗಳು ಈಗ ಬೆತ್ತಲಾಗಿವೆ. ಈಗಲಾದರೂ ಜನತೆಯ ಮುಂದೆ ಕ್ಷಮೆ ಕೇಳುತ್ತಾರಾ? ಎಂದು ಪ್ರಶ್ನಿಸಿದೆ.

# 10 ಹಸುಳೆಗಳ ಸಾವು

## ಮೂರು ಹಂತದ ತನಿಖೆಗೆ ರಾಜ್ಯ ಸರ್ಕಾರದ ಆದೇಶ

**(1ನೇ ಪುಟದಿಂದ)** ಸರ್ಕಾರವು ಮೂರು ಹಂತದ ತನಿಖೆಗೆ ಒಪ್ಪಿಸಿದೆ. ಈ ಆಸ್ಪತ್ರೆಯಲ್ಲಿ ಅವಧಿ ಮೀರಿದ ಅಗ್ನಿಶಾಮಕ ಉಪಕರಣಗಳಿದ್ದವು ಎಂಬ ವರದಿಯನ್ನು ಉತ್ತರ ಪ್ರದೇಶ ಸರ್ಕಾರ ತಳ್ಳಿ ಹಾಕಿದೆ.

ಶುಕ್ರವಾರ ರಾತ್ರಿ 10.45ರ ಸಮಯದಲ್ಲಿ ಮಹಾರಾಣಿ ಲಕ್ಷ್ಮಿ ಬಾಯಿ ವೈದ್ಯಕೀಯ ಕಾಲೇಜಿನ ಎನ್.ಐ.ಸಿ.ಯು. ಘಟಕದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಇದು ಬುಂದೇಲ್‌ಖಂಡ್ ವಲಯದ ಅತಿ ದೊಡ್ಡ ಆಸ್ಪತ್ರೆಯಾಗಿದೆ.

ಈ ಘಟಕದಲ್ಲಿ ಅವಧಿಗೆ ಮುಂಚೆ ಜನಿಸಿದ ನವಜಾತ ಶಿಶುಗಳನ್ನು ಇರಿಸಲಾಗಿತ್ತು. ಆಡಳಿತದ ನಿರ್ಲಕ್ಷ್ಯವೇ ಈ ಘಟನೆಗೆ ಕಾರಣ ಎಂದು ಪ್ರತಿಪಕ್ಷಗಳು ಆರೋಪಿಸಿವೆ.

ಬೆಂಕಿ ಕಾಣಿಸಿಕೊಂಡ 15 ರಿಂದ 20 ನಿಮಿಷಗಳಲ್ಲಿ ಬಹುತೇಕ ಮಕ್ಕಳನ್ನು ಪಿ.ಐ.ಸಿ.ಯು. ಘಟಕಕ್ಕೆ ವರ್ಗಾಯಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆಯಲ್ಲಿ ಮೃತಪಟ್ಟ ನವಜಾತ ಶಿಶುಗಳ ಕುಟುಂಬಗಳಿಗೆ ತಲಾ 5 ಲಕ್ಷ ರೂ. ಹಾಗೂ ಗಾಯಗೊಂಡವರ ಕುಟುಂಬಗಳಿಗೆ 50 ಸಾವಿರ ರೂ.ಗಳ ನೆರವು ನೀಡುವುದಾಗಿ ರಾಜ್ಯ ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಮಹಾರಾಷ್ಟ್ರ ಚುನಾವಣೆಗೆ ಕರ್ನಾಟಕದ ರಾಜಕೀಯ ಅಸ್ತ್ರ

## ಗ್ಯಾರಂಟಿ, ಆಪರೇಷನ್ ಕಮಲ ಪ್ರಸ್ತಾಪಿಸುತ್ತಿರುವ ನಾಯಕರು

ಬೆಂಗಳೂರು, ನ. 16 - ಕರ್ನಾಟಕ ರಾಜಕೀಯವನ್ನೇ ಅಸ್ತ್ರವಾಗಿಟ್ಟುಕೊಂಡು ಮಹಾರಾಷ್ಟ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಚುನಾವಣಾ ಹೋರಾಟ ನಡೆಸಿವೆ.

ಕರ್ನಾಟಕದ ಆಡಳಿತದಲ್ಲಿ ನಡೆದಿರುವ ಭ್ರಷ್ಟಾಚಾರ ಮತ್ತು ಜನರಿಗೆ ನೀಡಿದ ಭರವಸೆ ಈಡೇರಿಸುವಲ್ಲಿ ವಿಫಲವಾಗಿದೆ ಎಂದು ಪ್ರಧಾನಿ ನರೇಂದ್ರ, ಮೋದಿ ಸೇರಿದಂತೆ ಬಿಜೆಪಿ ಮುಖಂಡರು ದೂರಿದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಳೆದ ಎರಡು ದಿನಗಳಿಂದ ಮಹಾರಾಷ್ಟ್ರದ ಚುನಾವಣಾ ಪ್ರಚಾರದಲ್ಲಿ ಆಪರೇಷನ್ ಕಮಲವನ್ನೇ ಅಸ್ತ್ರವಾಗಿ ಬಳಕೆ ಮಾಡಿಕೊಂಡಿದ್ದಾರೆ.

ಪ್ರಚಾರಕ್ಕೆ ತೆರಳುವುದಕ್ಕೂ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ತಲಾ 50 ಕೋಟಿ ರೂ.ಗೆ ಕಾಂಗ್ರೆಸ್‌ನ 50 ಶಾಸಕರನ್ನು ಖರೀದಿ ಮಾಡಲು ಎನ್‌ಡಿಎ ಮುಂದಾಗಿದೆ ಎಂದು ಬಾಂಬ್ ಸಿಡಿಸಿದ್ದರು.

ಮಹಾರಾಷ್ಟ್ರದ ಚುನಾವಣಾ ಪ್ರಚಾರ ದಲ್ಲೂ ಇದನ್ನೇ ಅಸ್ತ್ರ ಮಾಡಿಕೊಂಡಿರುವ ಅವರುಗಳು, ಜನರಿಂದ ಆಯ್ಕೆಗೊಂಡ ಇಂಡಿಯಾ ಒಕ್ಕೂಟದ ಸರ್ಕಾರಗಳನ್ನು ಆಪರೇಷನ್ ಕಮಲದ ಮೂಲಕ ಉರುಳಿಸುವುದೇ ಎನ್‌ಡಿಎ ಕೆಲಸ ಎಂದು ದೂರುತ್ತಿದ್ದಾರೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭ್ರಷ್ಟಾಚಾರದ ವಿರುದ್ಧ ಮಾತನಾಡುತ್ತಾ 'ನಾ..., ಖಾವೋಂಗಾ, ನಾ.., ಖಾನೆ ದೂಂಗ' ಎನ್ನುತ್ತಾರೆ, ಆಪರೇಷನ್ ಕಮಲ ಮಾಡಲು ಹಣ ಎಲ್ಲಿಂದ ಬಂತು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಕರ್ನಾಟಕದಲ್ಲಿ 2008ರಲ್ಲಿ ಎಂಟು ಶಾಸಕರನ್ನು ಕೋಟ್ಯಂತರ ರೂ. ಖರ್ಚು ಮಾಡಿ ಖರೀದಿ ಮಾಡಿದರು, 2019ರಲ್ಲಿ 17 ಜನ ಶಾಸ ಕರನ್ನು ಖರೀದಿಸಿದರು, ಈ ಕೋಟ್ಯಂತರ ರೂ. ಬಿಜೆಪಿಗೆ ಎಲ್ಲಿಂದ ಬಂತು ಎಂದು ಪ್ರಶ್ನಿಸಿದ್ದಾರೆ.

ನರೇಂದ್ರ ಮೋದಿ ಅವರಿಗೆ ಭ್ರಷ್ಟಾಚಾರದ ಬಗ್ಗೆ ಮಾತನಾಡಲು ಯಾವುದೇ ನೈತಿಕ ಹಕ್ಕಿಲ್ಲ, ಗ್ಯಾರಂಟಿ ಯೋಜನೆಗಳ ಬಗ್ಗೆ ಲೇವಡಿ ಮಾಡಿ ಮಾತನಾಡುತ್ತಾರೆ, ಗ್ಯಾರಂಟಿ ಯೋಜನೆಗಳನ್ನು ಕರ್ನಾಟಕದಲ್ಲಿ ಘೋಷಣೆ ಮಾಡಿದಾಗ 5 ಗ್ಯಾರಂಟಿಗಳನ್ನೂ ಜಾರಿ ಮಾಡಲಾಗುವುದಿಲ್ಲ, ದೇಶದ ಅಭಿವೃದ್ಧಿ ಕುಂಠಿತವಾಗುತ್ತದೆ, ರಾಜ್ಯ ದಿವಾಳಿಯಾಗುತ್ತದೆ ಎಂದಿದ್ದರು, ಗ್ಯಾರಂಟಿ ಜಾರಿಯಾದ ರಾಜ್ಯಗಳು ಆರ್ಥಿಕವಾಗಿ ದಿವಾಳಿಯಾಗಿಲ್ಲ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಕೇಂದ್ರ ಸರ್ಕಾರಕ್ಕೆ ತೆರಿಗೆ ಕೊಡುವುದರಲ್ಲಿ ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದೆ, ಕರ್ನಾಟಕ ಎರಡನೇ ಸ್ಥಾನದಲ್ಲಿದೆ, ಕೇಂದ್ರಕ್ಕೆ 8 ಲಕ್ಷ 88 ಸಾವಿರ ಕೋಟಿ ರೂ. ನೀಡುತ್ತದೆ, ಆದರೆ, 1.30 ಸಾವಿರ ಕೋಟಿ ರೂ. ಮಾತ್ರ ವಾಪಸ್ ಬರುತ್ತಿದೆ ಎಂದವರು ಹೇಳಿದ್ದಾರೆ.

ನಿಮ್ಮ ತೆರಿಗೆಯಲ್ಲಿ 15 ಪೈಸೆ ಮಾತ್ರ ವಾಪಸ್ ಕೊಡುತ್ತಾರೆ, ಕರ್ನಾಟಕದಿಂದ 4.50 ಲಕ್ಷ ಕೋ ರೂ. ತೆರಿಗೆ ಕೊಟ್ಟರೆ 60,000 ಕೋಟಿ ರೂ. ಮಾತ್ರ ವಾಪಸ್ಸು ಬರುತ್ತದೆ, ಅಂದರೆ, ಒಂದು ರೂಪಾಯಿಗೆ 13 ರಿಂದ 14 ಪೈಸೆ ಮಾತ್ರ ವಾಪಸ್ ಬರುತ್ತಿದೆ, ಇದನ್ನು ವಿರೋಧ ಮಾಡಬೇಕೋ, ಬೇಡವೋ ? ಎಂದು ಪ್ರಶ್ನಿಸಿದರು.

# ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷರ ಚುನಾವಣೆ : ಪಿಡಿಒ ಅರುಣ್ ಕುಮಾರ್‌ಗೆ ಗೆಲುವು





ಹೊನ್ನಾಳಿ, ನ.16- ರಾಜ್ಯ ಸರ್ಕಾರಿ ನೌಕರರ ಸಂಘದ ಹೊನ್ನಾಳಿ ತಾಲ್ಲೂಕು ಘಟಕದ ಅಧ್ಯಕ್ಷರಾಗಿ ಕೆ. ಅರುಣ್ ಕುಮಾರ್ (ಪಂಚಾಯತ್ ರಾಜ್ಯ ಇಲಾಖೆ) ಅವರು ಗೆಲುವು ಸಾಧಿಸಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಕೆ. ಅರುಣ್ ಕುಮಾರ್ ಮತ್ತು ಕೆ. ಶಿವಪದ್ಮ ಅವರು ಉಮೇದುವಾರಿಕೆ ಸಲ್ಲಿಸಿದ್ದರು. ಅರುಣ್ ಕುಮಾರ್ 17 ಮತಗಳನ್ನು ಪಡೆದರೆ, ಕೆ. ಶಿವಪದ್ಮ 15 ಮತಗಳನ್ನು ಪಡೆದುಕೊಂಡರು.

ಎರಡು ಮತಗಳು ಕುಲಗೆಟ್ಟ ಮತಗಳಾಗಿದ್ದವು. ಕೆ. ಅರುಣ್ ಕುಮಾರ್ ವಿಜೇತರಾಗಿದ್ದಾರೆ ಎಂದು ಚುನಾವಣಾಧಿಕಾರಿ ಎಂ. ತಿಪ್ಪೇಶಪ್ಪ ಅವರು ಘೋಷಣೆ ಮಾಡಿದರು.

ರಾಜ್ಯ ಪರಿಷತ್ ಸದಸ್ಯರಾಗಿ ಧರ್ಮಪ್ಪ (ಕಂದಾಯ ಇಲಾಖೆ) ಅವರಿಗೆ 18 ಮತಗಳು ಬಂದಿದ್ದರೆ, ಪ್ರತಿ ಸ್ಪರ್ಧಿ ಎಂ. ನಾಗರಾಜನಾಯ್ಕ ಅವರಿಗೆ 15 ಮತಗಳು ಲಭಿಸಿ ದ್ದವು. 1 ಕುಲಗೆಟ್ಟ ಮತವಾಗಿತ್ತು. ಧರ್ಮಪ್ಪ ವಿಜೇತರಾದರು. ಅದೇ ರೀತಿ ಖಜಾಂಚಿ ಸ್ಥಾನದ ಮತ ಎಣಿಕೆಯಲ್ಲಿ ಬಿ.ಎಂ. ಅನಿಲ್ ಕುಮಾರ್ (ಶಿಕ್ಷಣ ಇಲಾಖೆ) ಅವರು 18 ಮತಗಳನ್ನು ಪಡೆದುಕೊಂಡರು. ಪ್ರತಿಸ್ಪರ್ಧಿ ಎಚ್.ಎಸ್. ಚೇತನ್ ಅವರಿಗೆ 14 ಮತಗಳು ಬಂದವು. 2 ಕುಲಗೆಟ್ಟ ಮತಗಳು ಇದ್ದವು. ಅನಿಲ್ ಕುಮಾರ್ ಜಯ ಗಳಿಸಿದರು.

**ಹೊನ್ನಾಳಿ**

ಅಫ್ಸರ್ ಅಹ್ಮದ್ ಸಹಾಯಕ ಚುನಾವಣಾಧಿಕಾರಿಯಾಗಿದ್ದರು.


॥ ಶ್ರೀ ಕಲ್ಲೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ



ದಾವಣಗೆರೆ ತಾ॥ ಮತ್ತು ಜಿ॥ ಕಬ್ಬೂರು ಗ್ರಾಮದ ವಾಸಿ

ಶ್ರೀಮತಿ ದ್ಯಾಮಮ್ಮ ದಿ॥ ಎ.ಆರ್. ಜಯ್ಯಪ್ಪ ಮತ್ತು ಮಕ್ಕಳು, ಶ್ರೀಮತಿ ರೇಖಾ ಹೆಚ್.ಎಂ. ಮತ್ತು ಮಕ್ಕಳು

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 28.10.2024ನೇ ಸೋಮವಾರ ಬೆಳಗಿನ ಜಾವ 01.50 ಗಂಟೆಗೆ

ಶ್ರೀಮತಿ ರೇಖಾ ಹೆಚ್.ಎಂ. ಇವರ ಪೂಜ್ಯ ಪತಿಯವರಾದ

**ಶರಣ ಎ.ಆರ್. ಕಲ್ಲೇಶ್**

ಅತ್ತಿಗೆರೆ ಗ್ರಾಮ ಪಂಚಾಯಿತಿ ಸದಸ್ಯರು, ಕಬ್ಬೂರು.

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

"ಕೈಲಾಸ ಶಿವಗಣಾರಾಧನೆ"ಯನ್ನು

ದಿನಾಂಕ : 17.11.2024 ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ತಾ॥ ಕಬ್ಬೂರು ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಮೃತರ ಧರ್ಮಪತ್ನಿ : ಶ್ರೀಮತಿ ರೇಖಾ ಹೆಚ್.ಎಂ. ಮತ್ತು ಮಕ್ಕಳು ಶ್ರೀಮತಿ ದ್ಯಾಮಮ್ಮ ದಿ॥ ಎ.ಆರ್. ಜಯ್ಯಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಮೃತರ ಸಹೋದರಿಯರು, ಅಳಿಯಂದಿರು, ಮಾವಂದಿರು, ಸೊಸೆಯಂದಿರು, ಅತ್ತಿಗೆರೆ ವಂಶಸ್ಥರು ಮತ್ತು ಕಬ್ಬೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.

ಫೋ. : 98445 08402, 98867 88622

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


# ಚಳ್ಳಕೆರೆ : ಗಾಂಜಾ ಮತ್ತಿನಲ್ಲಿ ಚಾಕು ಇರಿತ

ಚಳ್ಳಕೆರೆ, ನ. 16- ಇಲ್ಲಿನ ಬಳ್ಳಾರಿ ರಸ್ತೆಯಲ್ಲಿರುವ ಇಂಜಿನಿಯರ್ ಕಾಲೇಜು ಬಳಿ ಗಾಂಧಿ ನಗರದ ಯುವಕ ಗಾಂಜಾ ಮತ್ತಿ ನಲ್ಲಿ ಶ್ರೀನಿವಾಸ್, ನಾಗರಾಜ, ವೀರೇಶ್ ಎಂಬುವವರಿಗೆ ಚಾಕುವಿನಿಂದ ಇರಿ ದಿದ್ದಾನೆ ಎಂದು ಮೂಲಗಳು ತಿಳಿ ಸಿವೆ. ಮೂವರ ಪರಿಸ್ಥಿತಿ ಗಂಭೀರವಾ ಗಿದ್ದು, ಚಿತ್ರದುರ್ಗ ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಪೊಲೀಸ್ ಇಲಾಖೆಯಿಂದ ತಿಳಿದು ಬಂದಿದೆ. ಚಾಕು ಇರಿದ ಆರೋಪಿ ಯನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆನ್ನಲಾಗಿದೆ.

## ಮಲೇಬೆನ್ನೂರು ಪಟ್ಟಣದ ಪೂಜಾರ ಹಾಲಪ್ಪ ನಿಧನ



ಮಲೇಬೆನ್ನೂರು ಪಟ್ಟಣದ ಹಿರಿಯ ಮುತ್ಸದ್ಧಿ ದಿ. ಕೆ ಪಿ ಸಿದ್ದಬಸಪ್ಪನವರ ಸಹೋದರ ಹಾಗೂ ಮಲೇಬೆನ್ನೂರಿನ ಶ್ರೀ ಬೀರಲಿಂಗೇಶ್ವರ ವಿದ್ಯಾಸಂಸ್ಥೆ ಮತ್ತು ಶ್ರೀ ಬೀರಲಿಂಗೇಶ್ವರ ಕ್ರೆಡಿಟ್ ಕೋ ಆಫ್ -ಸೊಸೈಟಿಯ ನಿರ್ದೇಶಕರೂ ಆದ ಪೂಜಾರ ಹಾಲಪ್ಪ (74 ವರ್ಷ) ಅವರು ದಿನಾಂಕ 16-11-2024 ರ ಶನಿವಾರ ಸಾಯಂಕಾಲ 5-20 ಕ್ಕೆ ನಿಧನರಾದರು. ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯಂದಿರು, ಮೊಮಕ್ಕಳು ಸೇರಿದಂತೆ ಅಪಾರ ಬಂಧು -ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 17-11-2024 ರ ಭಾನುವಾರ ಮಧ್ಯಾಹ್ನ 1 ಗಂಟೆಗೆ ಮಲೇಬೆನ್ನೂರು ಪಟ್ಟಣದ ಹಾಲುಮತ ರುದ್ರಭೂಮಿಯಲ್ಲಿ ನೆರವೇರಲಿದೆ.

# ಮೇಜರ್ ವರದರಾಜನ್ ಜೀವನ ಚರಿತ್ರೆ ಪ್ರದರ್ಶಿಸುತ್ತಿದ್ದ ಚಿತ್ರಮಂದಿರದ ಮೇಲೆ ದಾಳಿ

ತಿರುನಲ್ವೇಲಿ, ನ. 18 – ಮೇಜರ್ ಮುಕುಂದ್ ವರದರಾಜನ್ ಅವರ ಜೀವನ ಚರಿತ್ರೆಯ ಚಲನಚಿತ್ರವಾದ 'ಅಮರನ್' ಪ್ರದರ್ಶನವಾಗುತ್ತಿದ್ದ ಚಿತ್ರಮಂದಿರದ ಮೇಲೆ ಕೆಲ ದುಷ್ಕರ್ಮಿಗಳು ಪೆಟ್ರೋಲ್ ಬಾಂಬ್ ಎಸೆದಿದ್ದಾರೆ.

ಈ ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ. ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಇಬ್ಬರು ದುಷ್ಕರ್ಮಿಗಳು ಮೇಲಪಾಳ್ಯಂನಲ್ಲಿರುವ ಚಿತ್ರಮಂದಿರದ ಮೇಲೆ ಪೆಟ್ರೋಲ್ ಬಾಂಬ್‌ಗಳನ್ನು ಎಸೆದಿದ್ದಾರೆ. ಪೆಟ್ರೋಲ್ ಬಾಂಬ್ ಸಿಡಿದಿವೆಯಾದರೂ, ಯಾರಿಗೂ ಗಾಯಗಳಾಗಿಲ್ಲ. ಇದರಿಂದ ಚಿತ್ರಮಂದಿರಕ್ಕೂ ಯಾವುದೇ ಹಾನಿಯಾಗಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ಘಟನೆಯನ್ನು ಖಂಡಿಸಿರುವ ತಮಿಳುನಾಡು ಬಿಜೆಪಿ ಉಪಾಧ್ಯಕ್ಷ ನಾರಾಯಣನ್ ತಿರುಪತಿ, ಮರಣೋತ್ತರವಾಗಿ ಅಶೋಕ ಚಕ್ರ ಪಡೆದಿರುವ ಮೇಜರ್ ಮುಕುಂದ್ ವರದರಾಜನ್ ಅವರ ಕುರಿತ ಚಲನಚಿತ್ರವಾದ 'ಅಮರನ್'ನಲ್ಲಿ ಯಾವುದೇ ಆಕ್ಷೇಪಾರ್ಹ ಅಂಶಗಳಿಲ್ಲ. ಆದರೂ, ಎಸ್.ಡಿ.ಪಿ.ಐ., ಎಂ.ಎ.ಎಂ.ಕೆ., ತೌಹೀದ್ ಜಮಾತ್ ಹಾಗೂ ಇತರೆ ಮೂಲಭೂತವಾದಿ ಸಂಘಟನೆಗಳು ಪ್ರತಿಭಟಿಸುತ್ತಿವೆ ಎಂದಿದ್ದಾರೆ.

ಈ ಚಲನಚಿತ್ರದಲ್ಲಿ ಮುಸ್ಲಿಮರನ್ನು ಉಗ್ರವಾದಿಗಳು ಎಂದು ಬಿಂಬಿಸಿಲ್ಲ. ಹಲವಾರು ಭಾರತೀಯ ಮುಸ್ಲಿಮರು ಹುತಾತ್ಮರಾಗಿರುವುದು ಹಾಗೂ ದೇಶಪ್ರೇಮಿಗಳಾಗಿರುವುದನ್ನು ಬಿಂಬಿಸಲಾಗಿದೆ. ಆದರೆ, ಕಾಶ್ಮೀರದಲ್ಲಿ ನಡೆಯುತ್ತಿರುವ ಉಗ್ರವಾದಿ ಚಟುವಟಿಕೆಗಳ ಮೇಲೆ ಬೆಳಕು ಚೆಲ್ಲಿರುವ ಕಾರಣಕ್ಕೆ ಮೂಲಭೂತವಾದಿ ಸಂಘಟನೆಗಳು ಚಲನಚಿತ್ರ ವಿರೋಧಿಸುತ್ತಿವೆ ಎಂದವರು ಹೇಳಿದ್ದಾರೆ.

ಘಟನೆ ನಡೆದ ನಂತರ ಚಿತ್ರಮಂದಿರಕ್ಕೆ ನುಗ್ಗಿದ ಆರೋಪದ ಮೇಲೆ ಹಿಂದೂ ಮುನ್ನಾನಿ ಸಂಘಟನೆಯ ಕೆಲ ಕಾರ್ಯಕರ್ತರನ್ನು ಬಂಧಿಸಿ ನಂತರ ಬಿಡುಗಡೆ ಮಾಡಲಾಗಿದೆ.

ಈ ಬಗ್ಗೆ ಮಾತನಾಡಿರುವ ಹಿಂದೂ ಮುನ್ನಾನಿ ಸಂಘಟನೆಯ ಉಪಾಧ್ಯಕ್ಷ ವಿ.ಪಿ. ಜಯಕುಮಾರ್, ಚಿತ್ರಮಂದಿರದ ಮಾಲೀಕರನ್ನು ಸಂತೈಸಲು ತೆರಳಿದ್ದೆವು. ಆದರೆ, ಪ್ರತಿಭಟಿಸಲು ಬಂದಿರುವು ದಾಗಿ ನಮ್ಮನ್ನೇ ಬಂಧಿಸಲಾಗಿದೆ ಎಂದಿದ್ದಾರೆ.

# ಕೊಟ್ಟೂರು; ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಮತ್ತು ರಾಜ್ಯ ಪರಿಷತ್ ಸ್ಥಾನಕ್ಕೆ ಆಯ್ಕೆ



ಕೊಟ್ಟೂರು, ನ.16- ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಕೊಟ್ಟೂರು ತಾಲ್ಲೂಕು ಘಟಕದ ಅಧ್ಯಕ್ಷ ಮತ್ತು ರಾಜ್ಯ ಪರಿಷತ್ ಸ್ಥಾನಕ್ಕೆ ಚುನಾವಣೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಪಶು ಸಂಗೋಪನಾ ಇಲಾಖೆಯ ಯೋಗೀಶ್ವರ ದಿನ್ನಿ ಹಾಗೂ ರಾಜ್ಯ ಪರಿಷತ್ ಸ್ಥಾನಕ್ಕೆ ಕಂದಾಯ ಇಲಾಖೆಯ ಎಸ್.ಎಂ. ಗುರುಬಸವರಾಜ ಅವರುಗಳು 11 ಮತ ಪಡೆದು ಗೆಲುವು ಸಾಧಿಸಿರುತ್ತಾರೆ.

# ಮೊಟ್ಟೆ ವಿತರಣೆಯಲ್ಲಿ ಲೋಪ : ಮುಖ್ಯ ಶಿಕ್ಷಕಿ ಮತ್ತು ದೈಹಿಕ ಶಿಕ್ಷಕ ಅಮಾನತು

ಚನ್ನಗಿರಿ, ನ.16- ಚನ್ನಗಿರಿ ತಾಲ್ಲೂಕು ಅರೇಹಳ್ಳಿ- ಕದರನಹಳ್ಳಿಯ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಮೊಟ್ಟೆ ವಿತರಣೆಯಲ್ಲಿ ಲೋಪವೆಸಗಿದ ಆರೋಪದ ಮೇಲೆ ಶಾಲೆಯ ಮುಖ್ಯ ಶಿಕ್ಷಕಿ ಶೋಭಾ ಮೊಹಿತೆ ಹಾಗೂ ಇದಕ್ಕೆ ಸಹಕರಿಸಿದ ದೈಹಿಕ ಶಿಕ್ಷಕ ಮಂಜುನಾಥ ಇಬ್ಬರನ್ನೂ ಅಮಾನತ್ತು ಮಾಡಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್ ಆದೇಶಿಸಿದ್ದಾರೆ.

ಶಾಲಾ ಮಕ್ಕಳಿಗೆ ಸರ್ಕಾರ ಹಾಗೂ ಅಜೀಂ ಪ್ರೇಮ್‌ಜಿ ಫೌಂಡೇಷನ್ ವತಿಯಿಂದ ವಾರದ ಎಲ್ಲಾ ದಿನಗಳಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರ ಸಿಗಲೆಂದು ಮೊಟ್ಟೆ, ಬಾಳೆಹಣ್ಣು, ಶೇಂಗಾ ಚಿಕ್ಕಿ ವಿತರಣೆ ಮಾಡಲಾಗುತ್ತದೆ. ವಿತರಣೆ ಮಾಡಿದ ಬಗ್ಗೆ ಆಯಾ ದಿನದಂದು ಎಸ್‌ಎಟಿಎಸ್ ತಂತ್ರಾಂಶದಲ್ಲಿ ದಾಖಲು ಮಾಡಲಾಗುತ್ತದೆ.

ನವೆಂಬರ್ 13 ರಂದು ಶಾಲೆಯಲ್ಲಿ ಭೌತಿಕವಾಗಿ 87 ಮಕ್ಕಳಿದ್ದು ಇದರಲ್ಲಿ 79 ಮೊಕ್ಕಳಿಗೆ ಮೊಟ್ಟೆ ವಿತರಣೆ ಮಾಡಿ ಉಳಿದ 8 ಮಕ್ಕಳಿಗೆ ಬಾಳೆಹಣ್ಣು ವಿತರಣೆ ಮಾಡಲಾಗಿರುತ್ತದೆ. ಆದರೆ ಎಸ್‌ಎಟಿಎಸ್ ತಂತ್ರಾಂಶದಲ್ಲಿ 104 ಮಕ್ಕಳಿರುತ್ತಾರೆ ಎಂದು ದಾಖಲು ಮಾಡಿರುವುದು ಕಂಡು ಬಂದಿದ್ದು ಮೊಟ್ಟೆ ವಿತರಣೆಯಲ್ಲಿ ಲೋಪವಾಗಿದೆ ಎಂದು ಸಮೂಹ ಸಂಪನ್ಮೂಲ ವ್ಯಕ್ತಿ ಶಾಲೆಗೆ ಭೇಟಿ ನೀಡಿದಾಗ ಕಂಡುಬಂದಿತ್ತು. ಈ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ವರದಿ ಮೇಲೆ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಿದ ಮೇರೆಗೆ ಅಮಾನತ್ತು ಮಾಡಲಾಗಿದೆ.

# ಸಮಾಜದಲ್ಲಿ ಮಹಿಳೆಗೆ ರಕ್ಷಣೆ ಬೇಕಿದೆ: ದೀಪಾ

## ಸಾಹಿತಿ ಸರೋಜ ನಾಗರಾಜ್ ಅವರಿಗೆ ವನಿತಾ ಸಾಹಿತ್ಯಶ್ರೀ ಪ್ರಶಸ್ತಿ ಪ್ರದಾನ



ದಾವಣಗೆರೆ, ನ.16- ಪ್ರಸಕ್ತ 21ನೇ ಶತಮಾನದಲ್ಲೂ ಸಮಾಜದಲ್ಲಿ ಸ್ತ್ರೀಯರಿಗೆ ರಕ್ಷಣೆ ಇಲ್ಲದಂತಾಗಿದೆ ಎಂದು ಶಿವಮೊಗ್ಗದ ಹಿರಿಯ ಸಾಹಿತಿ ಶ್ರೀಮತಿ ದೀಪಾ ಕುಬುಸದ್ ಬೇಸರ ವ್ಯಕ್ತಪಡಿಸಿದರು.

ವನಿತಾ ಸಾಹಿತ್ಯ ವೇದಿಕೆ ಹಾಗೂ 'ಜನತಾವಾಣಿ' ಸಹಯೋಗದಲ್ಲಿ ನಗರದ ವನಿತಾ ಸಮಾಜದಲ್ಲಿ ಶನಿವಾರ ಸಂಜೆ ಆಯೋಜಿಸಿದ್ದ ವನಿತಾ ಸಾಹಿತ್ಯ ವೇದಿಕೆಯ 30ನೇ ವಾರ್ಷಿಕೋತ್ಸವ ಮತ್ತು 69ನೇ ಕನ್ನಡ ರಾಜ್ಯೋತ್ಸವ ಹಾಗೂ ವನಿತಾ ಸಾಹಿತ್ಯಶ್ರೀ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮಹಿಳೆಯರು ಬದುಕುವ ಶೈಲಿ ಸುಧಾರಿಸಿದೆ. ಆದರೆ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯನ್ನು ಕಾಣುವ ದೃಷ್ಟಿ ಬದಲಾಗಿ, ಹೆಣ್ಣನ್ನು ನಿಂದಿಸುವ ಮತ್ತು ಹಿಂಸಿಸುವ ದುರುಳರಿಗೆ ಕಠಿಣ ಶಿಕ್ಷೆ ವಿಧಿಸುವ ಕಾನೂನುಗಳು ಬರಬೇಕು ಎಂದರು.

> **ಮಹಿಳೆಯರ ಸ್ವಾವಲಂಬಿ ಬದುಕಿನ ಆಲೋಚನೆಯೇ ವಿಚ್ಛೇದನಕ್ಕೆ ಕಾರಣವಾಗುತ್ತಿದೆ. ಹಾಗಾಗಿ ಅವಿಭಕ್ತ ಕುಟುಂಬ ಸ್ಥಾಪಿಸುವ ಸಂಸ್ಕಾರ-ಸಂಪ್ರದಾಯ ಮಕ್ಕಳಲ್ಲಿ ಬೆಳೆಸಬೇಕು.**
> **- ದೀಪಾ ಕುಬುಸದ್, ಸಾಹಿತಿ**

ಸ್ತ್ರೀ ಸಬಲೀಕರಣಕ್ಕೆ ಬೇಕಾದ ವ್ಯವಸ್ಥೆ ಸರ್ಕಾರದಿಂದ ರೂಪುಗೊಳ್ಳಬೇಕಿದೆ ಮತ್ತು ಕುಟುಂಬ ವ್ಯವಸ್ಥೆ ಬಲಪಡಿಸುವಲ್ಲಿ ಮನೆಯಲ್ಲಿನ ಹೆಣ್ಣು ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕು ಎಂದು ತಿಳಿಸಿದರು.

ವನಿತಾ ಸಮಾಜದ ಮಹಿಳಾ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯ ಶ್ಲಾಘನೀಯ ವಾಗಿದ್ದು, ಈ ಸಮಾಜ ಸುವರ್ಣ ಮಹೋತ್ಸವ ಆಚರಿಸಿಕೊಳ್ಳಲಿ ಎಂದು ಆಶಿಸಿದರು.

ಕನ್ನಡಕ್ಕೆ 8 ಜ್ಞಾನಪೀಠ ಪ್ರಶಸ್ತಿ ಬಂದ ಶ್ರೀಮಂತಿಕೆ ಇದೆ. ಪ್ರತಿಯೊಬ್ಬ ಕನ್ನಡಿಗನೂ ಕನ್ನಡ ಭಾಷೆಯನ್ನು ಬೆಳೆಸಬೇಕು. ಹಾಗೂ ಕನ್ನಡ ಪುಸ್ತಕಗಳನ್ನು ಓದುವ ಜತೆಗೆ ಖರೀದಿಸಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಶ್ರೀಮತಿ ಜಯಶೀಲಾ ಷಡಾಕ್ಷರಪ್ಪ ಅವರು, 'ಹೊನ್ನೇನಹಳ್ಳಿ ಹನುಮಕ್ಕ ನಂಜಪ್ಪ ಮೆಳ್ಳೇಕಟ್ಟೆ' ಅವರ ಸ್ಮರಣಾರ್ಥ ಜಿಲ್ಲೆಯ ಹಿರಿಯ ಸಾಹಿತಿ ಶ್ರೀಮತಿ ಸರೋಜ ನಾಗರಾಜ್ ಅವರಿಗೆ ಜಿಲ್ಲಾ ವನಿತಾ ಸಾಹಿತ್ಯಶ್ರೀ ಪ್ರಶಸ್ತಿ ಪ್ರದಾನ ಮಾಡಿದರು. ಸಮಾರಂಭದ ಪ್ರಾರಂಭಕ್ಕೂ ಮುನ್ನ ಕವಿಗೋಷ್ಠಿ ಜರುಗಿತು. ಗೋಷ್ಠಿಯಲ್ಲಿ 30ಕ್ಕೂ ಅಧಿಕ ಕವಿಗಳು ಕವನ ವಾಚನ ಮಾಡಿದರು.

ಕಾರ್ಯಕ್ರಮದಲ್ಲಿ ವನಿತಾ ಸಾಹಿತ್ಯ ವೇದಿಕೆಯ ಅಧ್ಯಕ್ಷೆ ಮಲ್ಲಮ್ಮ ನಾಗರಾಜ್, ವನಿತಾ ಸಮಾಜದ ಪದ್ಮ ಪ್ರಕಾಶ್, ನಲ್ಲೂರು ಲಕ್ಷ್ಮಣರಾವ್, ಶೈಲಜಾ, ಸಾಹಿತ್ಯ ವೇದಿಕೆ ಸದಸ್ಯರು ಇದ್ದರು.

# ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ

## ನ.28 ರವರೆಗೆ ತಿದ್ದುಪಡಿ: ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಶಮ್ಲಾ



ದಾವಣಗೆರೆ, ನ. 16 - ಭಾರತ ಚುನಾವಣಾ ಆಯೋಗದ ನಿರ್ದೇಶನದನ್ವಯ ಮತದಾರ ಪಟ್ಟಿಯ ಸಂಕ್ಷಿಪ್ತ ವಿಶೇಷ ಪರಿಷ್ಕರಣೆ ನಡೆಯುತ್ತಿದ್ದು, ಮತದಾರರ ಪಟ್ಟಿಗೆ ಹೊಸದಾಗಿ ಸೇರ್ಪಡೆ, ತಿದ್ದುಪಡಿ, ವರ್ಗಾವಣೆ ಹಾಗೂ ಆಕ್ಷೇಪಣೆಗಳಿದ್ದಲ್ಲಿ ನವೆಂಬರ್ 28 ರೊಳಗಾಗಿ ಸಲ್ಲಿಸಲು ಅವಕಾಶ ಇದೆ ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮತ್ತು ಮತದಾರರ ಪಟ್ಟಿ ವಿಶೇಷ ವೀಕ್ಷಕರಾದ ಶಮ್ಲಾ ಇಕ್ಬಾಲ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿವಿಧ ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಕುರಿತಂತೆ ಮಾಹಿತಿ ನೀಡುವ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈಗಾಗಲೇ ಅಕ್ಟೋಬರ್ 29 ರಂದು ಕರಡು ಮತದಾರರ ಪಟ್ಟಿ ಬಿಡುಗಡೆ ಮಾಡಲಾಗಿದೆ. ನವೆಂಬರ್ 28 ರ ವರೆಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ.

ಈ ಅವಧಿಯಲ್ಲಿ ನವೆಂಬರ್ 23 ನಾಲ್ಕನೇ ಶನಿವಾರ ಹಾಗೂ 24 ರ ಭಾನುವಾರ ರಜಾ ದಿನಗಳಂದು ವಿಶೇಷ ಕಾರ್ಯಾಚರಣೆ ಮಾಡಲಾಗುತ್ತದೆ.

ಸಾರ್ವಜನಿಕರು ತಮ್ಮ ಮತಗಟ್ಟೆ ವ್ಯಾಪ್ತಿಯ ಮತಗಟ್ಟೆ ಅಧಿಕಾರಿಗಳನ್ನು ಭೇಟಿ ಮಾಡಿ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಬಹುದು ಎಂದರು.

ಸಾರ್ವಜನಿಕರು ಮತದಾರರ ಪಟ್ಟಿಗೆ ಆಕ್ಷೇಪಣೆಗಳನ್ನು ತಹಶೀಲ್ದಾರರ ಕಚೇರಿ, ಉಪವಿಭಾಗಾಧಿಕಾರಿಗಳ ಕಚೇರಿ, ಪಾಲಿಕೆ ವ್ಯಾಪ್ತಿಯಲ್ಲಿ ಸಂಬಂಧಿಸಿದ ಕಾರ್ಯಾಲಯಗಳಿಗೆ ಹಾಗೂ ಬಿ.ಎಲ್.ಓ.ಗಳಿಗೆ ನೀಡಬಹುದಾಗಿದೆ. ಸ್ವೀಕರಿಸುವ ಎಲ್ಲಾ ಅರ್ಜಿಗಳನ್ನು ಡಿಸೆಂಬರ್ 24 ರೊಳಗಾಗಿ ಇತ್ಯರ್ಥಪಡಿಸಿ 2025 ರ ಜನವರಿ 6 ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ ಎಂದರು.

ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಮಾತನಾಡಿ, ಜಿಲ್ಲೆಯ 7 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 1,693 ಮತಗಟ್ಟೆಗಳಿದ್ದು ಎಲ್ಲಾ ಮತಗಟ್ಟೆಗಳಲ್ಲಿ ಮತಗಟ್ಟೆ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಇದರಲ್ಲಿ 1,048 ಶಿಕ್ಷಕರು, 501 ಅಂಗನವಾಡಿ ಕಾರ್ಯಕರ್ತೆಯರು, 61 ಆಶಾ ಕಾರ್ಯಕರ್ತೆಯರು, 38 ಬಿಲ್ ಕಲೆಕ್ಟರ್, 15 ಗ್ರಾಮ ಆಡಳಿತಾಧಿಕಾರಿಗಳು, 16 ದ್ವಿತೀಯ ದರ್ಜೆ ಸಹಾಯಕರು, 14 ಪ್ರಥಮ ದರ್ಜೆ ಸಹಾಯಕರು ಬಿಎಲ್‌ಓಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಹಾಗೂ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಉಪಸ್ಥಿತರಿದ್ದರು.

### ಜಿಲ್ಲೆಯಲ್ಲಿ 14.94 ಲಕ್ಷ ಮತದಾರರು

**ಕರಡು ಮತದಾರರ ಪಟ್ಟಿಯನ್ವಯ 2025 ರ ಜನವರಿಗೆ 1 ಕ್ಕೆ 19,14,379 ಜನಸಂಖ್ಯೆ ನಿರೀಕ್ಷಿಸಲಾಗಿದೆ. ಪ್ರಸ್ತುತ 7,43,476 ಪುರುಷ, 7,51,277 ಮಹಿಳೆ ಸೇರಿ 14,94,753 ಮತದಾರರಿದ್ದಾರೆ. ಇದು ಜನಗಣತಿ ಅಂಕಿ ಅಂಶಕ್ಕೆ ಹೋಲಿಕೆ ಮಾಡಿದಲ್ಲಿ ಶೇ 78.08 ಮತದಾರರಿದ್ದಾರೆ.**

**ವಯೋಮಾನದನ್ವಯ 18 ರಿಂದ 19 ವರ್ಷ 43,805 ಮತದಾರರಿದ್ದು ಜನಸಂಖ್ಯೆಗೆ ಶೇ 2.28%, 20-29 ವರ್ಷದವರೆಗೆ 2,98,110 ಮತದಾರರು ಜನಸಂಖ್ಯೆಗೆ ಶೇ 15.57% ಇದ್ದಾರೆ. 30-39 ರವರೆಗೆ 3,40,012 ಮತದಾರರು ಜನಸಂಖ್ಯೆಗೆ ಶೇ 17.76 ಹಾಗೂ 40-49 ರ** (4ನೇ ಪುಟಕ್ಕೆ)



**ವೀರಗಾಸೆ...** ಜಿಲ್ಲಾಡಳಿತ ವತಿಯಿಂದ 69ನೇ ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಇಲ್ಲಿನ ಗಾಜಿನ ಮನೆಯಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಶನಿವಾರ ಸಂಜೆ ವೀರಗಾಸೆ ಕಾರ್ಯಕ್ರಮ ಜರುಗಿತು.

## ಹಳೇ ಕುಂದುವಾಡದಲ್ಲಿ ನಾಳೆ ಲಕ್ಷ ದೀಪೋತ್ಸವ

ದಾವಣಗೆರೆ, ನ. 16- ಹಳೇ ಕುಂದುವಾಡದ ಶ್ರೀ ಕರಿಬಸವೇಶ್ವರ ಸ್ವಾಮಿ ಪುಣ್ಯ ಕ್ಷೇತ್ರದಲ್ಲಿ ನಾಡಿದ್ದು ದಿನಾಂಕ 18ರ ಸೋಮವಾರ ಸಂಜೆ 6 ಗಂಟೆಗೆ ಕಾರ್ತಿಕ ಮಾಸದ ಪ್ರಯುಕ್ತ ಲಕ್ಷ ದೀಪೋತ್ಸವ ಕಾರ್ಯಕ್ರಮ ನಡೆಯಲಿದೆ. ಶ್ರೀ ಕ್ಷೇತ್ರದ ಧರ್ಮಾಧಿಕಾರಿ ಜೆ. ರಾಜಣ್ಣ ಅವರು ಸಾನ್ನಿಧ್ಯ ವಹಿಸಲಿದ್ದಾರೆ. ಟ್ರಸ್ಟ್ ಗೌರವ ಅಧ್ಯಕ್ಷರೂ ಆದ ಶಾಸಕ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದು, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದರಾದ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಹುಲ್ಮನಿ ಗಣೇಶ್, ಡಾ. ಹೆಚ್.ಬಿ. ಅರವಿಂದ್ ಮತ್ತು ಇತರೆ ಗಣ್ಯರು ಭಾಗವಹಿಸಲಿದ್ದಾರೆ ಎಂದು ಕಾರ್ಯದರ್ಶಿ ಹೆಚ್.ಕರಿಬಸಪ್ಪ ತಿಳಿಸಿದ್ದಾರೆ.









# ನಗರದಲ್ಲಿ ಇಂದು ವಿಶ್ವ ಮಧುಮೇಹ ಮೇಳ, ಉಚಿತ ತಪಾಸಣೆ

ದಾವಣಗೆರೆ, ನ. 16- ಎಸಿಎಂ ಆಸ್ಪತ್ರೆ ಹಾಗೂ ಟ್ರಸ್ಟ್ ವತಿಯಿಂದ ದಿ. ಆಲೂರು ಚಂದ್ರಶೇಖರಪ್ಪ ಹಾಗೂ ಶ್ರೀಮತಿ ಸುನಂದಮ್ಮ ಆಲೂರು ಚಂದ್ರಶೇಖರಪ್ಪ ಅವರ ಜ್ಞಾಪಕಾರ್ಥವಾಗಿ 40 ನೇ ವಿಶ್ವ ಮಧುಮೇಹ ಮೇಳವನ್ನು ಆಲೂರು ಆಸ್ಪತ್ರೆಯ ಆವರಣದಲ್ಲಿ ನಾಳೆ ದಿನಾಂಕ 17 ರ ಭಾನುವಾರ ಹಮ್ಮಿಕೊಳ್ಳಲಾಗಿದೆ ಎಂದು ಸಕ್ಕರೆ ಕಾಯಿಲೆ ತಜ್ಞ ಡಾ. ಆಲೂರು ಮಂಜುನಾಥ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಕ್ಕರೆ ಕಾಯಿಲೆಗೋಸ್ಕರ ಮಧ್ಯ ಕರ್ನಾಟಕದಲ್ಲಿ ಸರ್ವತೋಮುಖ ಚಿಕಿತ್ಸೆಗಾಗಿ ಆಲೂರು ಆಸ್ಪತ್ರೆ ಹಾಗೂ ಟ್ರಸ್ಟ್ ಮತ್ತು ಸಂಶೋಧನಾ ಕೇಂದ್ರಗಳು ಕಳೆದ 40 ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿವೆ. ಸುಮಾರು ಒಂದು ಲಕ್ಷಕ್ಕೂ ಹೆಚ್ಚಿನ ಜನರಿಗೆ ಸಕ್ಕರೆ ಕಾಯಿಲೆ ಬಗ್ಗೆ ಮಧುಮೇಹ ಮೇಳದ ಮೂಲಕ ತಿಳಿವಳಿಕೆ ಮೂಡಿಸಲಾಗಿದೆ ಎಂದರು.

ಸಕ್ಕರೆ ಕಾಯಿಲೆ ತಜ್ಞ ಡಾ. ವರುಣಚಂದ್ರ ಆಲೂರು ಮಾತನಾಡಿ, ನಾಳೆ ಭಾನುವಾರ ಆಲೂರು ಆಸ್ಪತ್ರೆ ಆವರಣದಲ್ಲಿ ಉಚಿತ ರಕ್ತದಲ್ಲಿನ ಸಕ್ಕರೆ ಪ್ರಮಾಣ ತಪಾಸಣೆ, ಸಕ್ಕರೆ ಕಾಯಿಲೆಗೆ ದೈನಂದಿನ ಚಟುವಟಿಕೆಗಳು ಹಾಗೂ ದೇಹವನ್ನು ದಂಡಿಸುವ ಬಗ್ಗೆ ಉಪನ್ಯಾಸ, ಸಕ್ಕರೆ ಕಾಯಿಲೆ ಆಹಾರದ ಮಾಹಿತಿ, ಆಹಾರ ತಜ್ಞರಿಂದ ಸಕ್ಕರೆ ಕಾಯಿಲೆಯವರು ಸಂಪೂರ್ಣವಾಗಿ ತ್ಯಜಿಸಬೇಕಾದ ಆಹಾರದ ಪಟ್ಟಿ ಕುರಿತು ಮಾಹಿತಿ ನೀಡಲಾವುದು ಎಂದು ಹೇಳಿದರು.

ಸಕ್ಕರೆ ಕಾಯಿಲೆಯವರು ತೊಂದರೆಯಲ್ಲಿದ್ದಾಗ ಅನುಸರಿಸಬೇಕಾದ ಅತಿ ಮುಖ್ಯವಾದ ಮಾಹಿತಿ, ಸಕ್ಕರೆ ಕಾಯಿಲೆ ಉಳ್ಳವರ ಪಾದಗಳ ಸಂರಕ್ಷಣೆ ಹಾಗೂ ಕ್ರಮಗಳು, ಇನ್ಸುಲಿನ್ ಯಾಕೆ, ಹೇಗೆ, ಯಾರು, ಉಪಯೋಗಿಸುವ ಬಗ್ಗೆ ಮಾಹಿತಿ ನೀಡಲಾಗುವುದು ಎಂದು ತಿಳಿಸಿದರು.

ಇನ್ಸುಲಿನ್ ತೆಗೆದುಕೊಳ್ಳುವಾಗ ಅತಿ ಮುಖ್ಯವಾದ ಅಂಶಗಳು, ಸಕ್ಕರೆ ಕಾಯಿಲೆಯವರ ಬಂಜೆತನ ನಿವಾರಣೆಗೆ ತಜ್ಞರಿಂದ ಮಾಹಿತಿ, ಸಕ್ಕರೆ ಕಾಯಿಲೆ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ, ತಟ್ ಅಂತ ಹೇಳಿ ಸ್ಪರ್ಧೆ, ಸಕ್ಕರೆ ಕಾಯಿಲೆ ಬಗ್ಗೆ ಅನಿಸಿಕೆ, ಅನುಭವ ಮುಕ್ತ ಸಂಭಾಷಣೆ ಹಾಗೂ ಸಕ್ಕರೆ ಕಾಯಿಲೆ ಮಕ್ಕಳಿಗೆ ಉಚಿತವಾಗಿ ಇನ್ಸುಲಿನ್ ಮತ್ತು ರಕ್ತ ಪರೀಕ್ಷೆ ಮಾಡುವ ಗ್ಲುಕೋ ಮೀಟರ್ ವಿತರಣೆ ಮಾಡಲಾಗುವುದು ಎಂದರು.

## ನಗರದಲ್ಲಿ ಇಂದು ವಿಚಾರ ವೇದಿಕೆ ಉದ್ಘಾಟನೆ

ಬೇರು-ಚಿಗುರು ಕನ್ನಡ ಸಾಹಿತ್ಯ ಸಂಶೋಧನೆ ವಿಚಾರ ವೇದಿಕೆ ದಾವಣಗೆರೆ ಮತ್ತು ಚಿತ್ರದುರ್ಗ ಘಟಕಗಳ ಉದ್ಘಾಟನಾ ಸಮಾರಂಭವು ಇಂದು ಬೆಳಿಗ್ಗೆ 11ಕ್ಕೆ ರೋಟರಿ ಬಾಲ ಭವನದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ವಿಮರ್ಶಕ ಪ್ರೊ. ಲೋಕೇಶ್ ಅಗಸನಕಟ್ಟೆ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಬಿ. ಎನ್ ಮಲ್ಲೇಶ್, ಬಸವಾಪಟ್ಟಣದ ಜ.ಸ.ಪ್ರ ಕಾಲೇಜಿನ ಪ್ರಾಂಶುಪಾಲ ಡಾ ಎಂ.ಆರ್ ಲೋಕೇಶ್, ಎಂ. ಎಸ್. ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಡಿ.ಕೆ ಅಂಜನಪ್ಪ ಪಾಲ್ಗೊಳ್ಳಲಿದ್ದಾರೆ. ವೇದಿಕೆಯ ಅಧ್ಯಕ್ಷ ಡಾ. ಹೆಚ್. ಜಿ ವಿಜಯಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

# ಜ. 18 ರಂದು ಬ್ರಾಹ್ಮಣ ಮಹಾಸಮ್ಮೇಳನ

ದಾವಣಗೆರೆ, ನ. 16- ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ ಬರುವ ಜನವರಿ 18 ಮತ್ತು 19 ರಂದು ಎರಡು ದಿನಗಳ ಕಾಲ ಬೆಂಗಳೂರಿನ ತ್ರಿಪುರವಾಸಿನಿ ಸಭಾಂಗಣದಲ್ಲಿ ಸುವರ್ಣ ಸಂಭ್ರಮದ ಪ್ರಯುಕ್ತ ವಿಶ್ವಾಮಿತ್ರ ಹೆಸರಿನಲ್ಲಿ ಬ್ರಾಹ್ಮಣ ಮಹಾಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜನವರಿ 18 ರಂದು ಬೆಳಿಗ್ಗೆ 8 ಕ್ಕೆ ಲಕ್ಷ ಗಾಯತ್ರಿ ಹೋಮ ಪೂರ್ಣಾಹುತಿ ನಡೆಯಲಿದೆ. ಶೃಂಗೇರಿ ಶಾರದಾ ಪೀಠದ ಜಗದ್ಗುರು ಶಂಕರಾಚಾರ್ಯ ಶ್ರೀ ವಿಧುಶೇಖರ ಭಾರತೀ ಹಾಗೂ ಶ್ರೀ ಭಾರತೀ ತೀರ್ಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸಮ್ಮೇಳನದ ಉದ್ಘಾಟನೆ ನಡೆಯಲಿದೆ.

ಸೋಂದಾ ಸ್ವರ್ಣವಲ್ಲಿ ಮಠದ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ, ಶ್ರೀ ಯೋಗಾನಂದೇಶ್ವರ ಸರಸ್ವತಿ ಸ್ವಾಮೀಜಿ, ಶ್ರೀ ಶಂಕರ ಭಾರತಿ ಸ್ವಾಮೀಜಿ, ಶೃಂಗೇರಿ ಶಿವಗಂಗಾ ಮಠದ ಶ್ರೀ ಪುರುಷೋತ್ತಮ ಭಾರತಿ ಸ್ವಾಮೀಜಿ, ಶ್ರೀ ಅದ್ವೈತಾನಂದ ಭಾರತೀ ಸ್ವಾಮೀಜಿ ಆಗಮಿಸಲಿದ್ದಾರೆ.

ಜನವರಿ 19 ರಂದು ಬೆಳಿಗ್ಗೆ 10ರಿಂದ ಧರ್ಮಸಭೆ ನಡೆಯಲಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತಿ ಸ್ವಾಮೀಜಿ, ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಮಂತ್ರಾಲಯದ ಶ್ರೀ ಸುಬುದೀಂದ್ರ ಸ್ವಾಮೀಜಿ , ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ, ಶ್ರೀ ಯಾದಗಿರಿ ಯತಿರಾಜ ಸ್ವಾಮೀಜಿ ಸೇರಿದಂತೆ ವಿವಿಧ ಮಠಾಧೀಶರು ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಬ್ರಾಹ್ಮಣ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಸಗೋಡು ಜಯಸಿಂಹ, ಡಾ. ಶಶಿಕಾಂತ್, ಬಿಳಿಚೋಡು ಶಾಮರಾವ್, ವಿ.ಎಸ್. ನಾಯಕ್, ವೈ.ಎ.ಸುಧಾಕರ ಬಾಬು, ಕಾರ್ತಿಕ್ ಎಸ್. ಬಾಪಟ್, ಡಿ. ಬಸವರಾಜ್, ಬಿ.ಟಿ. ಅಚ್ಯುತ್, ಅನಿಲ್ ಬಾರೆಂಗಳ್ ಉಪಸ್ಥಿತರಿದ್ದರು.

**ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯರಿಗೆ 'ಕನಕಶ್ರೀ' ಪ್ರಶಸ್ತಿ: ಸ್ವಾಗತಾರ್ಹ** : ರಾಜ್ಯ ಸರ್ಕಾರ ಈ ಸಾಲಿನ 'ಕನಕ ಶ್ರೀ' ಪ್ರಶಸ್ತಿಯನ್ನು ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ ಅವರಿಗೆ ನೀಡಿರುವುದು ಸ್ವಾಗತಾರ್ಹ. ಇದಕ್ಕೆ ಕಾರಣರಾದ ಮುಖ್ಯಮಂತ್ರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಿಗೆ ಅಭಿನಂದನೆ ಸಲ್ಲಿಸುತ್ತೇವೆ ಎಂದು ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ ಹೇಳಿದರು.

ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ ಅವರು ಮಾಡಿರುವ ಅಧ್ಯಾತ್ಮ ಮತ್ತು ಸಾಹಿತ್ಯ ಬಹಳ ದೊಡ್ಡದು. ಅದು ನಾಡಿಗೆ ತಿಳಿದಿದೆ. ಅವರು ಕನಕದಾಸರ ಅಧ್ಯಯನಕ್ಕೆ ವಿಶೇಷ ಕೊಡುಗೆ ನೀಡಿದ್ದಾರೆ.

ಅವರನ್ನು ಅಭಿನಂದಿಸುವ ಮೂಲಕ ಕನ್ನಡ ನಾಡು ತನ್ನ ಭವ್ಯ ಪರಂಪರೆಯನ್ನು ಯಶಸ್ವಿಯಾಗಿ ಮುಂದುವರೆಸಿಕೊಂಡು ಬಂದಿದೆ ಎಂದರು.

# ಸುಲ್ತಾನ್ ಡೈಮಂಡ್ಸ್-ಗೋಲ್ಡ್ ಆಭರಣ ಮಾರಾಟ ಮೇಳಕ್ಕೆ ಚಾಲನೆ



ದಾವಣಗೆರೆ, ನ.16- ನಗರದ ಸುಲ್ತಾನ್ ಡೈಮಂಡ್ಸ್ ಮತ್ತು ಗೋಲ್ಡ್ ಶೋ ರೂಂನಲ್ಲಿ ಇಂದಿನಿಂದ ಇದೇ ದಿನಾಂಕ 30ರವರೆಗೆ ಸಂಸ್ಥೆಯ ದಕ್ಷಿಣ ಭಾರತದ 11ನೇ ಆವೃತ್ತಿಯ ಆಭರಣ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಹಮ್ಮಿಕೊಳ್ಳಲಾಗಿದೆ. ನಿನ್ನೆ ಸಂಜೆ ಜರುಗಿದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗೌರವ ಅತಿಥಿಗಳ ಸಮ್ಮುಖದಲ್ಲಿ ಪ್ರದರ್ಶನಕ್ಕೆ ಚಾಲನೆ ನೀಡಲಾಯಿತು.

ಈರುಳ್ಳಿ ವ್ಯಾಪಾರಿ ಹಾಗೂ ಕೆಬಿಎನ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಎ.ಸಿ ಅಸ್ಲಾಂ, ಸಫಾಜ್ ಸೆಕ್ಯುರಿಟಿ ಅಂಡ್ ಸರ್ವೀಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಮೊಹಮ್ಮದ್ ಸಾದ್, ಚಾರ್ಟರ್ಡ್ ಅಕೌಂಟೆಂಟ್ ಅಬ್ದುಲ್ ನಶೀರ್ ಯು.ಎಚ್, ಎಸ್.ಡಿ.ಪಿ.ಐ ಕಾರ್ಯದರ್ಶಿ ಫಯಾಜ್ ಅಹ್ಮದ್, ಶರಭೇಶ್ವರ ಹೋಟೆಲ್ ಮಾಲೀಕರಾದ ಎಚ್.ಬಿ ಭಾರತಿ, ಹರಿಹರ ಶ್ರೇಯಾ ಆಸ್ಪತ್ರೆಯ ಡಾ.ವೈ.ರಶ್ಮಿ ಪೂರ್ವಿ ಬೋಟಿಕ್‌ನ ಮಾಲೀಕರಾದ ವಿ.ಪೂರ್ವಿ ಮತ್ತಿತರರು ಸಮಾರಂಭದ ಅತಿಥಿಗಳಾಗಿದ್ದರು.

## ಹರಪನಹಳ್ಳಿ: 'ವಾಲ್ಮೀಕಿ ಸೇವಾ ರತ್ನ' ಪ್ರಶಸ್ತಿ ಪ್ರದಾನ



ಹರಪನಹಳ್ಳಿ, ನ.16- ಕರ್ನಾಟಕ 'ವಾಲ್ಮೀಕಿ ಸೇವಾರತ್ನ' ಪ್ರಶಸ್ತಿ ಪಡೆದಿರುವ ತಾಲ್ಲೂಕಿನ ಜಿಟ್ಟಿನಕಟ್ಟೆ ಗ್ರಾಮದ ನ್ಯಾಯವಾದಿ ಎಚ್.ಕೆ. ಮಂಜುನಾಥ, ಅರಸೀಕೆರೆ ಗ್ರಾಮದ ಉಪನ್ಯಾಸಕ ಡಾ.ಹಾದಿಮನಿ ರಮೇಶ್ ಅವರಿಗೆ ಬೆಂಗಳೂರಿನ ಗಾಂಧಿ ಭವನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮಹರ್ಷಿ ವಾಲ್ಮೀಕಿ ಗುರುಪೀಠ ದೊಡ್ಡಬಳ್ಳಾಪುರ ಮತ್ತು ಕರ್ನಾಟಕ ರಾಜ್ಯ ವಾಲ್ಮೀಕಿ ನಾಯಕ ನೌಕರರ ಒಕ್ಕೂಟದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ದೊಡ್ಡಬಳ್ಳಾಪುರ ವಾಲ್ಮೀಕಿ ಗುರುಪೀಠದ ಶ್ರೀ ಬ್ರಹ್ಮಾನಂದ ಸ್ವಾಮೀಜಿ, ಕರ್ನಾಟಕ ರಾಜ್ಯ ವಾಲ್ಮೀಕಿ ನಾಯಕ ನೌಕರರ ಸಂಘದ ರಾಜ್ಯ ಅಧ್ಯಕ್ಷ ಮೋಹನ್ ಕಿಶೋರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕರ್ನಾಟಕ ವಾಲ್ಮೀಕಿ ಸೇವಾರತ್ನ ಪ್ರಶಸ್ತಿಗೆ ಭಾಜನರಾದ ಈ ಈರ್ವರನ್ನು ಜಿಲ್ಲಾ ವಾಲ್ಮೀಕಿ ಸಮಾಜದ ಉಪಾಧ್ಯಕ್ಷ ಕೆ.ಉಚ್ಚೆಂಗೆಪ್ಪ, ಹರಪನಹಳ್ಳಿ ತಾಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ವೈ.ಡಿ.ಅಣ್ಣಪ್ಪ ಅಭಿನಂದಿಸಿದ್ದಾರೆ.

## ಜಯನಗರದಲ್ಲಿ ಇಂದು ರಾಜ್ಯೋತ್ಸವ

ದಾವಣಗೆರೆ, ನ.16- ಸ್ಥಳೀಯ ಜಯನಗರ ಗೆಳೆಯರ ಬಳಗದ ವತಿಯಿಂದ ನಾಳೆ ದಿನಾಂಕ 17 ರ ಭಾನುವಾರ ಸಂಜೆ 6 ಗಂಟೆಗೆ ಕಾಳಿದಾಸ ವೃತ್ತದಲ್ಲಿ ಪ್ರಥಮ ವರ್ಷದ ಜಯನಗರ ಕನ್ನಡ ಜಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಬಳಗದ ಗೌರವಾಧ್ಯಕ್ಷ ಜಿ. ಚಂದ್ರನಾಯ್ಕ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಮುಖಂಡರಾದ ಆರ್.ಎಸ್. ಶೇಖರಪ್ಪ, ದೂಡಾ ಅಧ್ಯಕ್ಷ ದಿನೇಶ ಕೆ.ಶೆಟ್ಟಿ, ಮಾಜಿ ಮೇಯರ್ ಉಮಾ ಪ್ರಕಾಶ್, ಪಾಲಿಕೆ ಸದಸ್ಯರಾದ ಸವಿತಾ ಗಣೇಶ್ ಹುಲ್ಮನಿ, ರೇಣುಕಾ ಶ್ರೀನಿವಾಸ್, ವೀರೇಶ್ ಪೈಲ್ವಾನ್, ನಾಗರಾಜ್ ಪಾಮೇನಹಳ್ಳಿ ಮತ್ತಿತರರು ಭಾಗವಹಿಸಲಿದ್ದಾರೆ. ನಾಳೆ ಬೆಳಿಗ್ಗೆ 8 ಕ್ಕೆ ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಧ್ವಜಾರೋಹಣ ನೆರವೇರಿಸಲಿದ್ದಾರೆ.

ಸಂಜೆಯ ವೇದಿಕೆ ಕಾರ್ಯಕ್ರಮದ ನಂತರ ಝೀ ಕನ್ನಡ ವಾಹಿನಿಯ ಸರಿಗಮಪ ಸ್ಪರ್ಧಿಗಳು ಹಾಗೂ ಕಾಮಿಡಿ ಕಿಲಾಡಿಗಳು ತಂಡದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಪತ್ರಿಕಾಗೋಷ್ಠಿಯಲ್ಲಿ ಕಣಸಾಳ್ ಭೀಮೇಶ್, ಶಿವಕುಮಾರ್, ಜಿ.ಸಿ. ಮಂಜುನಾಥ, ಗುರುರಾಜ್, ಮಂಜಣ್ಣ ಪಾಮೇನಹಳ್ಳಿ, ಚಂದ್ರಣ್ಣ, ಈಶ್ವರ್, ನಾಗಪ್ಪ, ಅಂಜಿನಪ್ಪ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಸ್ವಾಭಿಮಾನಿ ಬಳಗ ಉದ್ಘಾಟನೆ

ಜಿ. ಬಿ. ವಿನಯ್ ಕುಮಾರ್ ಸಾರಥ್ಯದ ಸ್ವಾಭಿಮಾನಿ ಬಳಗದ ಉದ್ಘಾಟನೆ, ವೆಬ್‌ಸೈಟ್ ಲೋಕಾರ್ಪಣೆ ಹಾಗೂ ಸಾಧಕರಿಗೆ ಗೌರವ ಪುರಸ್ಕಾರ ಕಾರ್ಯಕ್ರಮವು ಇಂದು ನಡೆಯಲಿದೆ. ಬೆಳಿಗ್ಗೆ 11 ಗಂಟೆಗೆ ಎಸ್. ಎಸ್. ಬಡಾವಣೆಯ ಎ. ಬ್ಲಾಕ್ ನಲ್ಲಿರುವ ಸ್ವಾಭಿಮಾನಿ ಬಳಗದ ಕಚೇರಿಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ಶ್ರೀ ಬಸವಪ್ರಭು ಸ್ವಾಮೀಜಿ, ತಂಜೀಮ್ ಉಲೇಮಾ ಅಹಲೇ ಸುನ್ನತ್ ಅಧ್ಯಕ್ಷ ಮೌಲಾನಾ ಖಾಜಿ ಮಹಮ್ಮದ್ ಇಲಿಯಾಜ್ ಖಾದ್ರಿ, ಡಾನ್ ಬಾಸ್ಕೋನ ಫಾದರ್ ರೆಜಿ ಜೇಕಬ್ ಅವರು ಸಾನಿಧ್ಯ ವಹಿಸುವರು. ಸ್ವಾಭಿಮಾನಿ ಬಳಗದ ಸಂಸ್ಥಾಪಕ ರಾಜ್ಯಾಧ್ಯಕ್ಷ ಜಿ. ಬಿ. ವಿನಯ್ ಕುಮಾರ್ ಅಧ್ಯಕ್ಷತೆ ವಹಿಸುವರು.



## ಗುಂಡಿ ಮುಚ್ಚುವ ಕಾಮಗಾರಿ ಆರಂಭ

**ಕೊಮಾರಹಳ್ಳಿ**

ಮಲೇಬೆನ್ನೂರು, ನ.16- ಶಿವಮೊಗ್ಗ ಹೆದ್ದಾರಿ - 25ರಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆ ಕೊಮಾರನಹಳ್ಳಿಯಿಂದ ಆರಂಭ ಮಾಡಿದೆ.

ಕೊಮಾರನಹಳ್ಳಿ - ಹರಿಹರದ ಮಧ್ಯೆ ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳಿಂದ ವಾಹನ ಚಾಲಕರಿಗೆ ಬಹಳ ತೊಂದರೆಯಾಗಿತ್ತು. ಅಲ್ಲದೇ, ಈ ಗುಂಡಿಗಳಲ್ಲಿ ಎಷ್ಟೋ ಜನ ಬಿದ್ದು ಗಾಯಗೊಳ್ಳುತ್ತಿದ್ದರು. ಹೆದ್ದಾರಿಯಲ್ಲಿ ಬಿದ್ದಿರುವ ಗುಂಡಿ ಮುಚ್ಚುವಂತೆ ಸಾರ್ವಜನಿಕರು ಮತ್ತು ವಾಹನ ಚಾಲಕರು ಲೋಕೋಪಯೋಗಿ ಇಲಾಖೆಗೆ ಆಗ್ರಹಿಸಿದ್ದರು.

ಕಳೆದ 4 ದಿನಗಳ ಹಿಂದೆ ಪಟ್ಟಣದ ಲಯನ್ಸ್ ಕ್ಲಬ್ ವತಿಯಿಂದ ಗುಂಡಿಗಳಿಗೆ ಗ್ರಾವೆಲ್ ಭರ್ತಿ ಮಾಡಿದ್ದರು. ಇದೀಗ ಗುಂಡಿ ಮುಚ್ಚಿ ಡಾಂಬರೀಕರಣ ಮಾಡುತ್ತಿರುವ ಕಾಮಗಾರಿ ಒಂದು ವಾರದೊಳಗೆ ಮುಕ್ತಾಯವಾಗಲಿದೆ ಎಂದು ಗುತ್ತಿಗೆದಾರರು ಮಾಹಿತಿ ನೀಡಿದರು.

ಎಇ ಗುರುಪಾದಸ್ವಾಮಿ ಸ್ಥಳದಲ್ಲಿದ್ದರು. ಲೋಕೋಪಯೋಗಿ ಇಲಾಖೆ ಗುಂಡಿ ಮುಚ್ಚಲು ಕೆಲಸ ಪ್ರಾರಂಭ ಮಾಡಿರುವ ಹಿನ್ನೆಲೆಯಲ್ಲಿ ಲಯನ್ಸ್ ಕ್ಲಬ್ ಪದಾಧಿಕಾರಿಗಳು ಕೃತಜ್ಞತೆ ಅರ್ಪಿಸಿದರು.

## ಜೈನ್ ತಾಂತ್ರಿಕ ಮಹಾವಿದ್ಯಾಲಯಕ್ಕೆ ನ್ಯಾಕ್ ಎ ಪ್ಲಸ್ ಮಾನ್ಯತೆ

ದಾವಣಗೆರೆ, ನ. 16- ನಗರದ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಗೆ ನ್ಯಾಕ್‌ನಿಂದ 'ಎ ಪ್ಲಸ್' ಮಾನ್ಯತೆ ಬಂದಿದೆ ಎಂದು ಸಂಸ್ಥೆಯ ಪ್ರಾಚಾರ್ಯ ಡಾ. ಡಿ.ಬಿ. ಗಣೇಶ ಹರ್ಷ ವ್ಯಕ್ತಪಡಿಸಿದ್ದಾರೆ.

ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜು ರಾಷ್ಟ್ರೀಯ ಮೌಲ್ಯಮಾಪನ ಮಾನ್ಯತಾ ಮಂಡಳಿ (ನ್ಯಾಕ್) ಯಿಂದ ಪ್ರತಿಷ್ಠಿತ 'ಎ ಪ್ಲಸ್' ಗ್ರೇಡ್ ಪಡೆದಿದೆ. ಇದರಿಂದ ದಾವಣಗೆರೆಯಲ್ಲಿಯೇ ಮೊದಲ ನ್ಯಾಕ್ ಎ ಪ್ಲಸ್ ಗ್ರೇಡ್ ಹೊಂದಿದ ತಾಂತ್ರಿಕ ಶೈಕ್ಷಣಿಕ ಸಂಸ್ಥೆಯಾಗಿ ಜೈನ್ ಮಹಾವಿದ್ಯಾಲಯ ಗುರುತಿಸಲ್ಪಟ್ಟಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಸ್ಥೆಯ ಡಾ. ರಾಜೇಂದ್ರ ಸಲೋನಿ, ರಾಹುಲ್, ಸಂತೋಷ್ ಉಪಸ್ಥಿತರಿದ್ದರು.

## ಹರಪನಹಳ್ಳಿ : ಮೇದಾರ ಸಮಾಜದಿಂದ ಶ್ರೀ ಕೇತೇಶ್ವರ ಸ್ವಾಮಿ ಜಯಂತ್ಯೋತ್ಸವ



ಹರಪನಹಳ್ಳಿ, ನ.16- ಪಟ್ಟಣದ ಮೇದಾರ ಕಾಲೋನಿಯಲ್ಲಿ ಮೇದಾರ ಸಮಾಜದ ಕುಲ ಗುರುಗಳಾದ ಶ್ರೀ ಕೇತೇಶ್ವರ ಸ್ವಾಮಿಗಳ 894ನೇ ಜಯಂತಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮೇದಾರ ಸಮಾಜದ ಅಧ್ಯಕ್ಷ ಕೆ.ಕೃಷ್ಣ, ಕಾರ್ಯದರ್ಶಿ ಎಂ. ಮಾರುತಿ, ಉಪಾಧ್ಯಕ್ಷ ಬಸವರಾಜ, ಸದಸ್ಯರಾದ ರಮೇಶ್ ಮಂಜುನಾಥ ಬಾಬು, ನವೀನ್, ಸಂದೀಪ್, ರಾಜು ಸೇರಿದಂತೆ ಇತರರಿದ್ದರು.

## ನಗರದಲ್ಲಿ ಇಂದಿನ ಜಿನ ಭಜನಾ ಸ್ಪರ್ಧೆಗೆ ಧರ್ಮಸ್ಥಳದ ಸುರೇಂದ್ರ

ಜೈನ್ ಮಿಲನ್ ಹಾಗೂ ಆದಿನಾಥ ಜೈನ್ ಮಿಲನ್ (ದಾವಣಗೆರೆ) ಮತ್ತು ಸಮಸ್ತ ದಿಗಂಬರ ಜೈನ್ ಸಮಾಜ (ದಾವಣಗೆರೆ) ಇವರುಗಳ ಆತಿಥ್ಯದಲ್ಲಿ ದಾವಣಗೆರೆ ವಿಭಾಗ ಮಟ್ಟದ ಕಿರಿಯರ ಹಾಗೂ ಹಿರಿಯರ ಜಿನ ಭಜನಾ ಸ್ಪರ್ಧೆ 8ನೇ ಆವೃತ್ತಿ ಉದ್ಘಾಟನಾ ಸಮಾರಂಭವನ್ನು ಕುವೆಂಪು ಭವನದಲ್ಲಿ ಇಂದು ಬೆಳಗ್ಗೆ 9ಕ್ಕೆ ಏರ್ಪಡಿಸಲಾಗಿದೆ.

ದಾವಣಗೆರೆ ವಿಭಾಗದ ಸ್ಥಾಪಕ ಅಧ್ಯಕ್ಷರು ಮತ್ತು ಮಾರ್ಗದರ್ಶಿಗಳಾದ ಉಷಾ ಜೈಪ್ರಕಾಶ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಉಪಾಧ್ಯಕ್ಷರು, ದಾವಣಗೆರೆ ವಿಭಾಗ, ವಲಯ-8 ರ ಹೆಚ್.ಪಿ. ಸುಮತಿಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಭಾ.ಜೈ.ಮಿ. ನವದೆಹಲಿಯ ರಾಷ್ಟ್ರೀಯ ಕಾರ್ಯಾಧ್ಯಕ್ಷ ಧರ್ಮಸ್ಥಳ ಸುರೇಂದ್ರಕುಮಾರ್ ಮತ್ತು ಉಪಾಧ್ಯಕ್ಷರು ಹಾಗೂ ಜಿನ ಭಜನಾ ಸ್ಪರ್ಧೆಯ ಪ್ರಧಾನ ರೂವಾರಿಗಳಾದ ಅನಿತಾ ಸುರೇಂದ್ರಕುಮಾರ್, ಕಾರ್ಯದರ್ಶಿ ಭರತರಾಜ್ ಎಸ್. ಹಜಾರಿ, ಜೈನ್ ಮಿಲನ್ ಅಧ್ಯಕ್ಷ ಶಾಂತರಾಜ್ ವನಕುದರೆ, ಆದಿನಾತ ಜೈನ್ ಮಿಲ್ ಅಧ್ಯಕ್ಷರಾದ ಪ್ರವೀಣಾ ಸುದರ್ಶನ, ಶ್ರೀ ಪದ್ಮಾಂಬಾ ಮಹಿಳಾ ಸಮಾಜ ಅಧ್ಯಕ್ಷೆ ಶ್ರೀಮತಿ ವರ್ಷಾ ಹೂಲಿ ಹಾಜರಿರುವರು.

**ಸಮಾರೋಪ** : ಸಂಜೆ 4.30ಕ್ಕೆ ಆಯೋಜಿಸಲಾಗಿದ್ದು, ಮುಖ್ಯ ಅತಿಥಿಗಳಾಗಿ ಅಖಿಲ ಕರ್ನಾಟಕ ಜೈನ್ ಮಹಿಳಾ ಒಕ್ಕೂಟದ ಪದ್ಮ ಪ್ರಕಾಶ್, ಭಾ.ಜೈ.ಮಿ. ವಲಯ-8ರ ಪ್ರಧಾನ ಕಾರ್ಯದರ್ಶಿ ರತ್ನರಾಜ್ ಎಂ., ಸಹಕಾರ್ಯದರ್ಶಿಗಳಾದ ಎಸ್.ಎ. ಪ್ರಶಾಂತ, ಮಹಾವೀರ್ ಗೋಗಿ, ಜಿನ ಭಜನಾ ಸ್ಪರ್ಧೆ ಕೇಂದ್ರ ಸಮಿತಿ - ಸಂಯೋಜಕ ವಿಲಾಸ್ ಪಾಸಣ್ಣನವರ, ಶ್ರೀ ಮಹಾವೀರ ಸಂಘದ ಅಧ್ಯಕ್ಷ ಡಿ. ಸುನೀಲಕುಮಾರ್, ಮಹಾವೀರ ಯುವ ಮಂಚ್ ಅಧ್ಯಕ್ಷ ಜಿತೇಂದ್ರಕುಮಾರ್ ಬೇತೂರು ಹಾಜರಿರುವರು.

## ರಾಣೇಬೆನ್ನೂರು ತಾಲ್ಲೂಕಿನಲ್ಲಿ ಮೆಕ್ಕೆಜೋಳಕ್ಕೆ ಬೆಂಕಿ

ರಾಣೇಬೆನ್ನೂರು, ನ. 15- ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ತಗುಲಿ ಅಪಾರ ಪ್ರಮಾಣದ ಮೆಕ್ಕೆಜೋಳ ಸುಟ್ಟು ಕರಕಲಾದ ಘಟನೆ ತಾಲ್ಲೂಕಿನ ಹೊಸಚಂದಾಪುರ ಗ್ರಾಮದಲ್ಲಿ ನಡೆದಿದೆ. ಚಿಕ್ಕ ಅರಳಿಹಳ್ಳಿ ಗ್ರಾಮದ ಬಸಪ್ಪ ನಿಂಗಪ್ಪ ಕುದರಿಹಾಳ (ಗುತ್ತಲ) ಎಂಬ ರೈತರಿಗೆ ಸೇರಿದ ಮೆಕ್ಕೆಜೋಳವಾಗಿದ್ದು, ಇವರು ಸಮೀಪದ ಹೊಸ ಚಂದಾಪುರ ಗ್ರಾಮದ ಹೊರವಲಯದಲ್ಲಿ ಒಕ್ಕಲು ಮಾಡಲು ತೆನೆಯನ್ನು ಹಾಕಿದ್ದರು. ಅಗ್ನಿ ಶಾಮಕ ಸಿಬ್ಬಂದಿ ಸ್ಥಳಕ್ಕಾಗಮಿಸಿ ಹೆಚ್ಚಿನ ಅನಾಹುತವನ್ನು ತಪ್ಪಿಸುವಲ್ಲಿ ಯಶಸ್ವಿಯಾದರು.

# ನಗರದ ಗ್ಲಾಸ್‌ಹೌಸ್‌ನಲ್ಲಿ ಇಂದು ಸಾಂಸ್ಕೃತಿಕ ಕಾರ್ಯಕ್ರಮ

ದಾವಣಗೆರೆ ಜಿಲ್ಲಾಡಳಿತ ವತಿಯಿಂದ 69ನೇ ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಇಂದು ಮತ್ತು ನಾಳೆ ಸಂಜೆ 5.30ಕ್ಕೆ ಗಾಜಿನ ಮನೆಯಲ್ಲಿ ಸುವರ್ಣ ಸಂಭ್ರಮ ನಡೆಯಲಿದೆ.

ಇಂದು ಮಹೇಶ್ ಕುಮಾರ್ ಮತ್ತು ತಂಡದವರಿಂದ ಚಂಡೆವಾದನ, ಬಸವ ಕಲಾ ಲೋಕ ಅವರಿಂದ ಸಂಗೀತ ಕಾರ್ಯಕ್ರಮ, ಪಂಡಿತ್ ಎಂ. ಎಸ್ ಪ್ರದೀಪ್ ಕುಮಾರ್, ಇವರಿಂದ ಸಿತಾರ್ ವಾದನ, ದಿನಾಂಕ 23 ರಂದು ರಾಮಚಂದ್ರ ಹಡಪದ ಇವರಿಂದ ಸಂಗೀತ ಕಾರ್ಯಕ್ರಮ, ಸಂಕರ್ಷಣ ನೃತ್ಯ ಶಾಲೆಯಿಂದ ನೃತ್ಯ ರೂಪಕ ಏರ್ಪಾಡಾಗಿದೆ. ಇದೇ ದಿನಾಂಕ 24 ರಂದು ರಮೇಶ್‌ನಾಥ್ ಕದ್ರಿ ಇವರಿಂದ ಸ್ಯಾಕ್ಸೊಫೋನ್ ವಾದನ, ನೂಪುರ ಕಲಾ ಸಂಸ್ಥೆಯವರಿಂದ ನೃತ್ಯ ರೂಪಕ, ನವೆಂಬರ್ 29 ರಂದು ಶೃತಿ ಮತ್ತು ಸಂಗಡಿಗರಿಂದ ಲಂಬಾಣಿ ನೃತ್ಯ, ಅದಮ್ಯ ಕಲಾ ಸಂಸ್ಥೆಯವರಿಂದ ವಾದ್ಯ ಸಂಗೀತ, ಪರಶುರಾಮ್ ಸಂಗಡಿಗರಿಂದ ಜಾನಪದ ಸಂಗೀತ, ನವೆಂಬರ್ 30 ರಂದು ಚಿರಂತನ ಅಕಾಡೆಮಿಯಿಂದ ನೃತ್ಯ ರೂಪಕ, ಸವಿತಾ ಗಣೇಶ್ ಅವರಿಂದ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ.

## ನಗರಕ್ಕೆ ಇಂದು ಜೈನ ಮುನಿಗಳು

ಪಾದಯಾತ್ರೆ ಮೂಲಕ ಶ್ರೀ ಕ್ಷೇತ್ರ ಶ್ರವಣಬೆಳಗೊಳಕ್ಕೆ ತೆರಳುತ್ತಿರುವ ಸುಮಾರು 20ಕ್ಕೂ ಹೆಚ್ಚು ದಿಗಂಬರ ಮುನಿಗಳು ಇಂದು ಸಂಜೆ ನಗರಕ್ಕೆ ಆಗಮಿಸಿ 1008 ಶ್ರೀ ಪಾರ್ಶ್ವನಾಥ ಸ್ವಾಮಿ ದಿಗಂಬರ ಜೈನ ಬಸದಿಗೆ ಭೇಟಿ ನೀಡುವರು.

## ಹೈಸ್ಕೂಲ್ ಮೈದಾನ ಉಳಿಸಿ : ಪ್ರತಿಭಟನೆ

ಪ್ರತಿದಿನವೂ ಇತರೆ ಖಾಸಗಿ ಕಾರ್ಯಕ್ರಮಗಳಿಗೆ ಹೈಸ್ಕೂಲ್ ಮೈದಾನವನ್ನು ನೀಡಿ, ಕ್ರೀಡಾಪಟುಗಳಿಗೆ ತೊಂದರೆ ಮಾಡುತ್ತಿರುವ ಆಡಳಿತ ವ್ಯವಸ್ಥೆ ವಿರುದ್ಧ ಮಾರ್ನಿಂಗ್ ಸ್ಟಾರ್ ಫುಟ್ ಬಾಲ್ ಕ್ಲಬ್ ವತಿಯಿಂದ ಇಂದು ಬೆಳಿಗ್ಗೆ 8.30 ಕ್ಕೆ ಪಾಲಿಕೆ ಆವರಣದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.


**ಶ್ರೀ ಶಿವಕುಮಾರ ಸ್ವಾಮಿ ಕ್ರೆಡಿಟ್ ಕೋ. ಆಪ್ ಸೊಸೈಟಿ ಲಿ.,**
#1660/47-1, 1ನೇ ಮಹಡಿ, 12ನೇ ಕ್ರಾಸ್, ತರಳಬಾಳು ಬಡಾವಣೆ, ವಿದ್ಯಾನಗರ, ದಾವಣಗೆರೆ-5.

**ಬೇಕಾಗಿದ್ದಾರೆ**

ನಮ್ಮ ಸಹಕಾರ ಸಂಘದಲ್ಲಿ ಖಾಲಿ ಇರುವ ಕಾರ್ಯದರ್ಶಿ ಹುದ್ದೆಗೆ ಕಂಪ್ಯೂಟರ್ ಜ್ಞಾನ ಹೊಂದಿರುವ ಬಿ.ಕಾಂ./ಬಿಬಿಎಂ ಪದವೀಧರರು, ಅನುಭವವಿರುವ ಪುರುಷ ಅಭ್ಯರ್ಥಿ ಕನ್ನಡ ಭಾಷೆಯಲ್ಲಿ ತಮ್ಮ ಅರ್ಜಿಯನ್ನು ಸಿದ್ಧಪಡಿಸಿ ಅಗತ್ಯ ದಾಖಲೆಗಳೊಂದಿಗೆ ಸಂಘದಲ್ಲಿ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ.

**ಫೋ. : 99008 83911, 99801 40532**

**ನಮ್ಮ ಸಂಘದಲ್ಲಿ ದಿನಾಂಕ : 01.11.2024 ರಿಂದ ಖಾಯಂ ಠೇವಣಿಗೆ ಈ ಕೆಳಕಂಡಂತೆ ಆಕರ್ಷಕ ಬಡ್ಡಿ ನೀಡಲಾಗುವುದು.**

| ಕ್ರ. ಸಂ. | ಠೇವಣಿಗಳ ಅವಧಿ | ನಾಗರಿಕರಿಗೆ | ಹಿರಿಯ ನಾಗರಿಕರಿಗೆ |
|---|---|---|---|
| 1) | 1 ವರ್ಷದಿಂದ 2 ವರ್ಷದವರೆಗೆ | 8.50% | 9.00% |
| 2) | 2 ವರ್ಷದಿಂದ 3 ವರ್ಷದವರೆಗೆ | 9.00% | 9.50% |
| 3) | 3 ವರ್ಷಗಳ ಮೇಲ್ಪಟ್ಟು | 9.50% | 10.00% |


## ಕ್ರಯಪತ್ರ ಕಳೆದಿದೆ

**ಶ್ರೀ ಸಂತೋಷ್ ಪಿ. ಜೈನ್** ಬಿನ್ ಪಾರ್ಶ್ವನಾಥ್ ಮತ್ತು **ಶ್ರೀಮತಿ ಮಮತಾ ಆರ್.** ಕೋಂ. ಸಂತೋಷ್ ಪಿ. ಜೈನ್ ಆದ ನಾವು ಕೊಡುವ ಸಾರ್ವಜನಿಕ ಪ್ರಕಟಣೆ ಏನೆಂದರೆ, ನೀಲಾನಹಳ್ಳಿ ಗ್ರಾಮದ ನಿವಾಸಿಯಾದ ಶ್ರೀ ಹನುಮಂತಪ್ಪ ಬಿನ್ ಮೂರ್ತಪ್ಪ ಇವರಿಂದ ನಿವೇಶನ ಸಂಖ್ಯೆ ; 64. ಉದ್ದ 40 ಅಡಿಗಳು, ಅಗಲ 35 ಅಡಿಗಳು ಚಕ್ಕುಬಂದಿ : ಪೂರ್ವಕ್ಕೆ : ಸೈಟ್ ನಂ. : 65, ಪಶ್ಚಿಮಕ್ಕೆ : ಸೈಟ್ ನಂ. : 63, ಉತ್ತರಕ್ಕೆ : ಸೈಟ್ ನಂ.: 59, ದಕ್ಷಿಣಕ್ಕೆ : ರಸ್ತೆ ನಿವೇಶನವನ್ನು ಖರೀದಿಸಿರುತ್ತೇವೆ. ಸದರಿ ಆಸ್ತಿಯ ಹನುಮಂತಪ್ಪ ಇವರಿಗೆ ನೀಲಾನಹಳ್ಳಿ ಪಂಚಾಯಿತಿಯಿಂದ ಹಕ್ಕು ಪತ್ರದ ಮೂಲಕ ದಿನಾಂಕ : 16.01.1989 ರಂದು ಬಂದಿರುತ್ತದೆ. ಸದರಿ ಮೂಲ ಹಕ್ಕುಪತ್ರ ಹಾಗೂ ಇತರೆ ದಾಖಲೆಗಳನ್ನು ಬ್ಯಾಂಕಿಗೆ ತೆಗೆದುಕೊಂಡು ಹೋಗುವ ಸಮಯದಲ್ಲಿ ಪತ್ರಗಳನ್ನು ಕಳೆದುಕೊಂಡಿರುತ್ತೇವೆ. ಇದರಿಂದ Lost Report Complaint No. 1329131/2024 dated : 11.11.2024 ರಂದು ಮಾಡಿದ್ದೇನೆ. ನಾನು ಎಸ್‌ಬಿಐ ಬ್ಯಾಂಕ್‌ನಲ್ಲಿ ಲೋನ್ ಮಾಡಿಸಬೇಕು. ಆದ್ದರಿಂದ ಯಾರಿಗಾದರೂ ಸಿಕ್ಕಿದ್ದಲ್ಲಿ ಕೂಡಲೇ ಈ ಕೆಳಗಿನ ನಂಬರ್‌ಗೆ ಸಂಪರ್ಕಿಸಲು ಕೋರಿದೆ. **ಫೋ. : 90603 31047, 73495 44001.**

**-ಇಂತಿ ತಮ್ಮ ವಿಶ್ವಾಸಿ, ಶ್ರೀ ಸಂತೋಷ್ ಪಿ. ಜೈನ್**


**ಕಲ್ಯಾಣ ಬೆಳಕು ವಧುವರ ವೇದಿಕೆ**

**ಕರ್ನಾಟಕದಾದ್ಯಂತ ಜಂಗಮ & ಲಿಂಗಾಯತ ಆನ್ಲೈನ್ ವಾಟ್ಸಪ್ ವಧುವರ ವೇದಿಕೆ**

**ಫೋ. : 78291 46919**

ನಮ್ಮ ಗ್ರೂಪ್‌ಗಳಿಂದ ಮದುವೆ ನಿಶ್ಚಯವಾದರೆ ಯಾವುದೇ ಶುಲ್ಕ ಇರುವುದಿಲ್ಲ.

ಪ್ರವೇಶ ಶುಲ್ಕ ರೂ. 500/- ಮಾತ್ರ

ಬಾಪೂಜಿ ವಿದ್ಯಾಸಂಸ್ಥೆ (ರಿ)

**ಬಾಪೂಜಿ ಕಾಲೇಜ್ ಆಫ್ ಪಿಸಿಯೋಥೆರಪಿ**

ಎಸ್.ಎಸ್.ಐ.ಎಂ.ಎಸ್. ಕ್ಯಾಂಪಸ್, ರಾಷ್ಟ್ರೀಯ ಹೆದ್ದಾರಿ-4, ಬೈಪಾಸ್‌ರಸ್ತೆ, ದಾವಣಗೆರೆ 577005, ಕರ್ನಾಟಕ.

Bapuji Educational Association (Regd.)



**BAPUJI COLLEGE OF PHYSIOTHERAPY**

"Jnanashankara", NH-4, Bypass Road, Davangere - 577 005.

Ph : 08192-266307 / 266305 / 266334, E-mail : bcphy2024@gmail.com,



**ಪ್ರವೇಶ ಪ್ರಕಟಣೆ 2024-25**

'ಬಾಪೂಜಿ ವಿದ್ಯಾ ಸಂಸ್ಥೆ', ದಾವಣಗೆರೆ ಅಡಿಯಲ್ಲಿ 2024-2025 ನೇ ಶೈಕ್ಷಣಿಕ ವರ್ಷದಿಂದ ನೂತನವಾಗಿ ಪ್ರಾರಂಭವಾಗಿರುವ **'ಬಾಪೂಜಿ ಕಾಲೇಜ್ ಆಫ್ ಪಿಸಿಯೋಥೆರಪಿ'** ದಾವಣಗೆರೆ, ಪದವಿ ಕೋರ್ಸ್‌ಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ದಿನಾಂಕ 25-11-2024 ಸಂಜೆ 5-00 ಗಂಟೆಯ ಒಳಗಾಗಿ ಖುದ್ದಾಗಿ ಮೇಲ್ಕಂಡ ವಿಳಾಸದಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

| ಕೋರ್ಸ್ ಮತ್ತು ಅವಧಿ | ಅರ್ಹತೆ |
|---|---|
| ಬ್ಯಾಚುಲರ್ ಆಫ್ ಫಿಸಿಯೋಥೆರಪಿ ಒಟ್ಟು 4 ವರ್ಷ 6 ತಿಂಗಳು (6 ತಿಂಗಳು ಇಂಟರ್ನ್‌ಶಿಪ್) | ಪಿ.ಯು.ಸಿ. ಯ ವಿಜ್ಞಾನ ವಿಭಾಗದಲ್ಲಿ ಕನಿಷ್ಟ ಶೇಕಡವಾರು 40 ಅಂಕಗಳನ್ನು ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಹಾಗೂ ಇಂಗ್ಲೀಷ್ ವಿಷಯಗಳಲ್ಲಿ ಪಡೆದಿರಬೇಕು. ಎಸ್ಸಿ/ಎಸ್ಟಿ ವಿದ್ಯಾರ್ಥಿಗಳು ಮೇಲಿನ ವಿಷಯಗಳಲ್ಲಿ ಕನಿಷ್ಟ ಶೇಕಡವಾರು 35 ಅಂಕಗಳನ್ನು ಪಡೆದಿರಬೇಕು. |

ಪ್ರವೇಶಕ್ಕಾಗಿ ಸಂಪರ್ಕಿಸಿ

**ರವಿ ಆರ್.ಜಿ.**
ವ್ಯವಸ್ಥಾಪಕರು
ಫೋನ್ : 94497 63322
ಕಛೇರಿಯ ಫೋನ್ : 08192-266307

# ಮುಡಾ : ಹಿರಿಯ ಅಧಿಕಾರಿ ನಟೇಶ್ ಪ್ರಾಸಿಕ್ಯೂಷನ್‌ಗೆ ಸರ್ಕಾರ ಒಪ್ಪಿಗೆ

**ಮೂರು ವಾರಗಳ ನಂತರ ಅನುಮತಿ**

ಬೆಂಗಳೂರು, ನ. 16 - ಮುಖ್ಯಮಂತ್ರಿಗಳ ಕುಟುಂಬಕ್ಕೆ 14 ನಿವೇಶನಗಳ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಡಾದ ಮಾಜಿ ಆಯುಕ್ತ ಹಾಗೂ ಸರ್ಕಾರದ ಹಿರಿಯ ಅಧಿಕಾರಿ ನಟೇಶ್ ಅವರ ಪ್ರಾಸಿಕ್ಯೂಷನ್‌ಗೆ ರಾಜ್ಯ ಸರ್ಕಾರ ಕೊನೆಗೂ ಅನುಮತಿ ನೀಡಿದೆ.

ಮಾಜಿ ಆಯುಕ್ತರುಗಳಾದ ನಟೇಶ್ ಹಾಗೂ ದಿನೇಶ್ ಕುಮಾರ್ ಅವರುಗಳನ್ನು ವಿಚಾರಣೆಗೆ ಒಳಪಡಿಸಲು ಅನುಮತಿ ನೀಡುವಂತೆ ಲೋಕಾಯುಕ್ತ ಪೋಲಿಸರು ಸರ್ಕಾರದ ಮುಖ್ಯಕಾರ್ಯದರ್ಶಿ ಅವರ ಅನುಮತಿ ಕೋರಿದ್ದರು.

ಮೂರು ವಾರಗಳ ನಂತರ ಮುಖ್ಯಕಾರ್ಯದರ್ಶಿ ಅವರು ನಟೇಶ್ ವಿಚಾರಣೆಗೆ ನಿಯಮ 17(ಎ) ಅಡಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಾರೆ.

ಆದರೆ, ಬಿಡಿ ನಿವೇಶನಗಳ ಹಂಚಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಹಿಂದಿನ ಆಯುಕ್ತ ದಿನೇಶ್ ಕುಮಾರ್ ಅವರ ವಿಚಾರಣೆಗೆ ಸರ್ಕಾರ ಇನ್ನೂ ಅನುಮತಿ ನೀಡದಿರುವುದು ಚರ್ಚೆಗೆ ಗ್ರಾಸವಾಗಿದೆ.

ಸರ್ಕಾರದ ಅನುಮತಿ ದೊರೆತಿರುವ ಹಿನ್ನೆಲೆಯಲ್ಲಿ ಲೋಕಾಯುಕ್ತ ಪೋಲಿಸರು, ನಟೇಶ್ ಅವರನ್ನು ವಿಚಾರಣೆಗೆ ಒಳಪಡಿಸಿ ಅಗತ್ಯ ಬಿದ್ದರೆ, ಕ್ರಿಮಿನಲ್ ದಾವೆ ಹೂಡಿ ಬಂಧಿಸಲು ಅವಕಾಶವಿದೆ. ನಿವೇಶನಗಳ ಮರುಹಂಚಿಕೆಯಲ್ಲಿ ಭಾರೀ ಭ್ರಷ್ಟಾಚಾರ ಎಸಗಿದ್ದಾರೆಂಬ ಆರೋಪ ನಟೇಶ್ ಅವರ ಮೇಲಿದೆ.

ಸರ್ಕಾರ ಅನುಮತಿ ನೀಡುತ್ತಿದ್ದಂತೆ ಮೈಸೂರು ಲೋಕಾಯುಕ್ತ ಪೋಲಿಸ್ ವರಿಷ್ಠಾಧಿಕಾರಿ ಟಿ.ಜೆ. ಉದೇಶ್ ಅವರು, ನಟೇಶ್ ಅವರಿಗೆ ನೋಟಿಸ್ ಜಾರಿ ಗೊಳಿಸಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ.

ನಟೇಶ್ ಅವರನ್ನು ಈಗಾಗಲೇ ಇ.ಡಿ. ಅಧಿಕಾರಿಗಳು ಮೂರು ಬಾರಿ ತಮ್ಮ ಕಚೇರಿಗೆ ಕರೆಸಿಕೊಂಡು ವಿಚಾರಣೆ ನಡೆಸಿ ಕಳುಹಿಸಿಕೊಟ್ಟಿದ್ದಾರೆ.

ಇದಕ್ಕೂ ಮುನ್ನ ಇ.ಡಿ. ಅಧಿಕಾರಿಗಳು ನಟೇಶ್ ಅವರ ಮನೆ ಮತು ಕಚೇರಿ ಮೇಲೆ ದಾಳಿ ನಡೆಸಿ ಕೆಲವು ದಾಖಲೆಗಳನ್ನು ವಶಕ್ಕೆ ಪಡೆದಿದ್ದರು ಎಂಬುದನ್ನು ಇಲ್ಲಿ ಸ್ಮರಿಸಬಹುದು.

# ನಿಜಲಿಂಗಪ್ಪ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾಗಿ ಕೆ.ಎಸ್.ರಮೇಶ್





**ಕಾರ್ಯದರ್ಶಿಯಾಗಿ ಡಿ.ಎಸ್. ಸಿದ್ದಣ್ಣ**

ದಾವಣಗೆರೆ, ನ.15- ನಗರದ ಶ್ರೀ ಎಸ್.ನಿಜಲಿಂಗಪ್ಪ ಬಡಾವಣೆ ಕ್ಷೇಮಾಭಿವೃದ್ಧಿ ಸಮಿತಿಯನ್ನು ಪುನರ್ರಚಿಸಲಾಗಿದ್ದು, ಅಧ್ಯಕ್ಷರಾಗಿ ಕೆ. ಎಸ್. ರಮೇಶ್, ಪ್ರಧಾನ ಕಾರ್ಯದರ್ಶಿಯಾಗಿ ಡಿ.ಎಸ್. ಸಿದ್ದಣ್ಣ ಆಯ್ಕೆಯಾಗಿದ್ದಾರೆ.

ಎಸ್. ಸುನೀಲ್, ಸುನೀಲ್ ಕುಮಾರ್ ಡಿ., ರುದ್ರಪ್ಪ ಆರ್. ಕೆ., ರತ್ನಾಕರ್ ಆರ್.ವಿ., ಸಾಗರ್ ಡಿ. ಎಸ್., ಟಿ. ಶ್ರೀನಿವಾಸ್ ದಾಸ ಕರಿಯಪ್ಪ, ನಾರಾಯಣ ಸ್ವಾಮಿ ಎಂ.ಜಿ., ಶ್ರೀಕರ ಕೆ. ಎಚ್., ವೀರೇಶ್ ಎ.ಜಿ., ಡಿ.ವಿ .ಜಯಚಂದ್ರ, ಮಹಬೂಬ್ ಪಾಷಾ, ತೀರ್ಥರಾಜ್ ಎಚ್.ಸಿ., ಕಾರ್ಯಕಾರಿ ಸಮಿತಿ ಸದಸ್ಯರಾಗಿ ಭಾರತಿ ವೀರೇಶ್, ಚಂದ್ರಶೇಖರ್ ಆರ್., ದಯಾಳು, ಜಯಪ್ರಕಾಶ್, ಅನಿಲ್ ಬಾರೆಂಗಳ್ ನಿರ್ದೇಶಕರುಗಳಾಗಿದ್ದಾರೆ.

# ಮಹಾಲಕ್ಷ್ಮಿ ಸೊಸೈಟಿ ನಿರ್ದೇಶಕರಾಗಿ ಜಿ. ಬಸವರಾಜ್



ದಾವಣಗೆರೆ, ನ.16- ನಗರದ ಮಹಾಲಕ್ಷ್ಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿರ್ದೇಶಕರಾಗಿ ಕಾವ್ಯ ಪ್ರಾವಿಜನ್ ಸ್ಟೋರ್ ಮಾಲೀಕ ಆನೆಕೊಂಡದ ಜಿ.ಬಸವರಾಜ್ ನೇಮಕಗೊಂಡಿದ್ದಾರೆ. ಈ ಸ್ಥಾನವು ಸೊಸೈಟಿ ಅಧ್ಯಕ್ಷ ಎ.ಆರ್. ಉಜ್ಜಿನಪ್ಪ ಅವರ ನಿಧನದಿಂದ ತೆರವಾಗಿತ್ತು ಎಂದು ಕಾರ್ಯದರ್ಶಿ ಎಸ್. ಬಸವರಾಜ್ ತಿಳಿಸಿದ್ದಾರೆ.

# ಮಣಿಪುರ ಸಚಿವರು, ಶಾಸಕರ ಮನೆಗಳಿಗೆ ನುಗ್ಗಿ ಪ್ರತಿಭಟನೆ

ಇಂಫಾಲ್, ನ. 16 – ಮಣಿಪುರದ ಜಿರಿಭಮ್ ಜಿಲ್ಲೆಯಲ್ಲಿ ಹತರಾದ ಮೂವರಿಗೆ ನ್ಯಾಯ ಒದಗಿಸುವಂತೆ ಒತ್ತಾಯಿಸಿ ಇಬ್ಬರು ಸಚಿವರು ಹಾಗೂ ಮೂವರು ಶಾಸಕರ ಮನೆಗಳಿಗೆ ಪ್ರತಿಭಟನಾಕಾರರು ನುಗ್ಗಿದ್ದಾರೆ. ಶಾಸಕರ ಮನೆಗಳಿಗೆ ಜನರು ನುಗ್ಗಿರುವ ಕಾರಣ, ಈ ಪ್ರದೇಶದಲ್ಲಿ ಇಂಫಾಲ್ ಪಶ್ಚಿಮದ ಅಧಿಕಾರಿಗಳು ನಿಷೇಧಾಜ್ಞೆ ಹೇರಿದ್ದಾರೆ. ಆರೋಗ್ಯ ಸಚಿವ ಸಪ್ಮ ರಂಜನ್, ಗ್ರಾಹಕ ವ್ಯವಹಾರಗಳ ಸಚಿವ ಸುಸಿಂದ್ರೊ ಸಿಂಗ್, ಶಾಸಕರಾದ ಆರ್.ಕೆ. ಇಮೊ, ಸಪಮ್ ನಿಶಿಕಾಂತ ಸಿಂಗ್ ಹಾಗೂ ಲಂಫೆಲ್ ಸನಕೀ ತೆಲ್ ಮನೆಗಳಿಗೆ ಪ್ರತಿಭಟನಾಕಾರರು ನುಗ್ಗಿದ್ದಾರೆ.

ಜಿರಿಭಮ್ ಜಿಲ್ಲೆಯಲ್ಲಿ 6 ಜನರು ಕಾಣೆಯಾಗಿದ್ದರು. ಇವರ ಪೈಕಿ ಮೂವರ ಮೃತದೇಹಗಳು ಜಿರಿ ಹಾಗೂ ಬರಕ್ ನದಿಗಳ ದಂಡೆಯಲ್ಲಿ ಪತ್ತೆಯಾಗಿದ್ದವು.

# ಶಾಮನೂರು ಡೈಮಂಡ್, ಶಿವಗಂಗಾ ಕಪ್ ಟೂರ್ನಿ ಹಂದರಗಂಬ ಪೂಜೆ



ದಾವಣಗೆರೆ, ನ.16- ಇದೇ ದಿನಾಂಕ 27 ರಿಂದ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ದಿ। ಪಾರ್ವತಮ್ಮ ಶಾಮನೂರು ಶಿವಶಂಕರಪ್ಪನವರ ಸ್ಮರಣಾರ್ಥ ಶಾಮನೂರು ಡೈಮಂಡ್, ಶಿವಗಂಗಾ ಕಪ್ ಕ್ರಿಕೆಟ್ ಟೂರ್ನಿ ನಡೆಯಲಿದ್ದು, ಈ ಸಂಬಂಧ ಹಂದರಗಂಬ ಪೂಜೆಯನ್ನು ಇಂದು ನೆರವೇರಿಸುವುದರ ಮೂಲಕ ಸಿದ್ಧತಾ ಕಾರ್ಯ ಆರಂಭಿಸಲಾಯಿತು.

ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಶಿವಗಂಗಾ ಶ್ರೀನಿವಾಸ್, ಜಯಪ್ರಕಾಶ್ ಗೌಡ, ಹೆಚ್. ಮಹದೇವ್, ಶಿವಾನಂದ್, ಹಾಲಪ್ಪ, ಚಂದ್ರು, ರಂಗಸ್ವಾಮಿ, ಸುರೇಶ್, ಶಾಂತಕುಮಾರ್, ಯೋಗಿ ಮತ್ತಿತರರು ಈ ಸಂದರ್ಭದಲ್ಲಿದ್ದರು.


## ಬೇಕಾಗಿದ್ದಾರೆ

ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ
(ಫುಲ್ ಟೈಂ)
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :
ಫೋ. : 96861 95326


## ವಿದೇಶ ಪ್ರವಾಸ - ಶುಭ ಹಾರೈಕೆ



ದಾವಣಗೆರೆಯ
ಶ್ರೀ ಭರತ್ ರಾಜ್ ಸಿ.ಸಿ.,
ಮುಖ್ಯ ವಿಮಾ ಸಲಹೆಗಾರರು,
ಭಾರತೀಯ ಜೀವ ವಿಮಾ ನಿಗಮ, ಬ್ರ್ಯಾಂಚ್ -2 ಇವರು
10 ದಿನಗಳ ಮಲೇಶಿಯಾ, ಇಂಡೋನೇಷಿಯಾ ಮತ್ತು ಬ್ಯಾಂಕಾಕ್ ಪ್ರವಾಸ ಕೈಗೊಂಡಿದ್ದು ಇವರ ಪ್ರಯಾಣ ಸುಖಕರವಾಗಿರಲೆಂದು ಶುಭ ಹಾರೈಸುವ

- ಪುತ್ರಿ : ಕು. ಇಂಚರ ಬಿ.ಸಿ., ಉದಯ ಮ್ಯೂಸಿಕ್ ಚಾನಲ್ ನಿರೂಪಕಿ
- ಶ್ರೀಮತಿ ಶ್ರೀ ಇಂದೂಧರ ಸಿ.ಸಿ. ಸಹೋದರ, ಸಹೋದರಿಯರು ಮತ್ತು ಮಕ್ಕಳು
- ನಿರಂಜನ್ ಸಿ.ಬಿ. ಕುಟುಂಬದವರು, ಬೆಂಗಳೂರು.
- ಚನ್ನಪ್ಪ ಕುಟುಂಬದವರು, ಕೂಲಂಬಿ.
- ಧರ್ಮಪ್ಪ ಕುಟುಂಬದವರು, ದೊಡ್ಡಮಲ್ಲಾಪುರ ● ಚೇಲ್ಡರ್ ಕುಟುಂಬದವರು, ಬೆನಕನಹಳ್ಳಿ.

ಹಾಗೂ ಸ್ನೇಹಿತರಾದ ● ಟಿ. ಚಂದ್ರಶೇಖರ, ಎಲ್‌ಐಸಿ ಪ್ರತಿನಿಧಿ, ದಾವಣಗೆರೆ.

# ಬಸವರಾಜಪ್ಪಗೆ ಸಹಕಾರ ರತ್ನ



ಹೊನ್ನಾಳಿ, ನ.15- ಸಹಕಾರ ಕ್ಷೇತ್ರದಲ್ಲಿನ ಸೇವೆಗಾಗಿ ತಾಲ್ಲೂಕಿನ ಶಿಮುಲ್ ನಿರ್ದೇಶಕ ಹನುಮನಹಳ್ಳಿ ಬಿ.ಜಿ. ಬಸವರಾಜಪ್ಪ ಗೌಡ್ರು ಅವರಿಗೆ ರಾಜ್ಯ ಸರ್ಕಾರದಿಂದ 'ಸಹಕಾರ ರತ್ನ' ಪ್ರಶಸ್ತಿ ಲಭಿಸಿದೆ.


## We are Hiring Now

MAHARAJ SOAPS INDUSTRY PVT. LTD.,
No. 768/500, Lokikere Main Road
Near Industrial Area, Davangere.
Email: msipl.hr@live.com

**Accounts Manager**
No of Positions: 1
Qualification:
- M.Com/CA Intermediate Completed.
- Minimum experienced required 10+ yearsAccounts.
- ERP Knowledge is mandatory.
- Proven account management experience.
- Ability to prioritize among competing tasks Critical thinking and problem-solving skills.

**Senior Accountant**
No of Positions: 2
Qualification:
- M.Com with minimum 60%
- Minimum experienced required 6+ years in Accounts.
- ERP Knowledge is mandatory.
- Proven account management experience.
- Detail-oriented.

An attractive salary package.

99455 26169 • 9513636552
Call Between : 10.00am to 6.00pm

## ಇಂದು ಕೊನೆಯ ದಿನ

FORUM OF PRACTICING ARCHITECTS & CIVIL ENGINEERS (R)
Free Entry
BUILD MAT - EXPO
ಕಟ್ಟಡ ಸಾಮಗ್ರಿಗಳ ಇಂಟಿರಿಯರ್, ಎಕ್ಸ್‌ಟೀರಿಯರ್ ಗೃಹಲಂಕಾರಗಳ & ಫರ್ನಿಚರ್
ವಸ್ತು ಪ್ರದರ್ಶನ
VENUE: HIGH SCHOOL GROUND, P B ROAD, DAVANAGERE
Supported By:
BMS BEAUTIFUL HOMES SERVICE
Sree Devi TILES & STONES PVT. LTD
Aditya windows (a venture of Aditya Fabrication)
All are Welcome
A Event by: US COMMUNICATIONS, Bengaluru, 9986814680


## ಹಾರ್ದಿಕ ಅಭಿನಂದನೆಗಳು



ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಜಿಲ್ಲಾ ಶಾಖೆ, ದಾವಣಗೆರೆ, ಇದರ 2024-29ನೇ ಸಾಲಿಗೆ ನಡೆದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸತತ 3ನೇ ಬಾರಿಗೆ ಜಯ ಗಳಿಸಿರುವ ಆತ್ಮೀಯರೂ ಆಗಿರುವ

**ಶ್ರೀ ಪರಶುರಾಮಪ್ಪ ಸಿ.**

ಇವರಿಗೆ ಹಾರ್ದಿಕ ಅಭಿನಂದನೆಗಳು.

ಅಭಿಮಾನಿ ಬಳಗ,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ದಾವಣಗೆರೆ

## ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್,

ಆಡಳಿತ ಕಛೇರಿ : # 120, ಹೆಚ್.ಎಂ. ರಸ್ತೆ, ದಾವಣಗೆರೆ – 577 001

### ಮುಧೋಳ್ ಶಾಖೆಯ ಉದ್ಘಾಟನಾ ಸಮಾರಂಭ

ದಿನಾಂಕ : 18-11-2024 ಸೋಮವಾರ ಬೆಳಗ್ಗೆ : 10-30 ಘಂಟೆಗೆ
ಸ್ಥಳ : # 5745, ವಾರ್ಡ್ 5, ರನ್ನ ಸರ್ಕಲ್, ಲೋಕಾಪುರ ರಸ್ತೆ, ಮುಧೋಳ ತಾ।।, ಬಾಗಲಕೋಟೆ ಜಿ।।





ನೂತನ ಶಾಖೆಯ ಉದ್ಘಾಟನೆ :
ಸನ್ಮಾನ್ಯ ಡಾ. ಶಾಮನೂರು ಶಿವಶಂಕರಪ್ಪರವರು
ಶಾಸಕರು, ದಾವಣಗೆರೆ ದಕ್ಷಿಣ ಕ್ಷೇತ್ರ, ಮಾಜಿ ಸಚಿವರು ಕರ್ನಾಟಕ ಸರ್ಕಾರ.

ಭದ್ರತಾ ಕೊಠಡಿ ಉದ್ಘಾಟನೆ :
ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರು
ಗಣಿ, ಭೂವಿಜ್ಞಾನ ಮತ್ತು ತೋಟಗಾರಿಕೆ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ.
ಸನ್ಮಾನ್ಯ ಶ್ರೀ ಆರ್. ಬಿ. ತಿಮ್ಮಾಪೂರ್
ಅಬಕಾರಿ ಹಾಗೂ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ.

ವಿಶೇಷ ಆಹ್ವಾನಿತರು :
ಸನ್ಮಾನ್ಯ ಶ್ರೀ ಗೋವಿಂದ ಕಾರಜೋಳರವರು
ಮಾಜಿ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಹಾಲಿ ಲೋಕಸಭಾ ಸದಸ್ಯರು, ಚಿತ್ರದುರ್ಗ, ಭಾರತ ಸರ್ಕಾರ.
ಸನ್ಮಾನ್ಯ ಶ್ರೀಮತಿ ಡಾ. ಪ್ರಭಾ ಮಲ್ಲಿಕಾರ್ಜುನ್‌ರವರು
ಲೋಕಸಭಾ ಸದಸ್ಯರು, ದಾವಣಗೆರೆ, ಭಾರತ ಸರ್ಕಾರ.

ತಮಗೆಲ್ಲರಿಗೂ ಆದರದ ಸುಸ್ವಾಗತ ಬಯಸುವವರು :

| | |
|---|---|
| ಡಾ. ಶಾಮನೂರು ಶಿವಶಂಕರಪ್ಪನವರು<br>ಶಾಸಕರು, ದಾವಣಗೆರೆ ದಕ್ಷಿಣ ಹಾಗೂ ಮಾಜಿ ಸಚಿವರು<br>ಅಧ್ಯಕ್ಷರು | ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್<br>ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರು<br>ಉಪಾಧ್ಯಕ್ಷರು |

ಆಡಳಿತ ಮಂಡಲಿ ನಿರ್ದೇಶಕರುಗಳು :

| | | | |
|---|---|---|---|
| ಡಾ. ಎ. ಎಸ್. ವೀರಣ್ಣ | ಡಾ. ಹೆಚ್. ಶಿವಪ್ಪ | ಡಾ. ಕೆ. ಹನುಮಂತಪ್ಪ | ಡಾ।। ಎಂ.ಎಂ. ಅಂಗರಾಜ |
| ಡಾ. ಬಿ.ಎಸ್. ರೆಡ್ಡಿ | ಡಾ।। ಪಿ. ಶಶಿಕಲಾ | ಡಾ।। ಅರುಣ್‌ಕುಮಾರ್ | ಶ್ರೀ ಕೆ. ಬೊಮ್ಮಣ್ಣ |
| ಡಾ. ಷಂಶಾದ್ ಬೇಗಂ | ಡಾ. ಬಿ. ಪೂರ್ಣಿಮಾ | ಡಾ।। ಸಿ.ವೈ. ಸುದರ್ಶನ್ | ಶ್ರೀ ಕೆ.ಎಸ್. ವೀರೇಶ್ |
| | | | ಡಾ।। ಸುರೇಂದ್ರ ಶೆಟ್ಟಿ |

ವ್ಯವಸ್ಥಾಪನ ಮಂಡಲಿ ಸದಸ್ಯರು :

| | |
|---|---|
| ಅಧ್ಯಕ್ಷರು : ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ | ಡಾ. ಜಿ.ಎಸ್. ಯತೀಶ್ |
| ಡಾ. ಎ.ಎಸ್. ವೀರಣ್ಣ | ಡಾ. ಜಿ.ವೈ. ವಿಶ್ವನಾಥ್ |
| ಡಾ. ಬಿ. ಪೂರ್ಣಿಮಾ | ಕು. ಜೆ. ಅನಿತಾಕುಮಾರಿ |

ಶ್ರೀ ಬಸವರಾಜ್ ಎಂ., ಪ್ರಧಾನ ವ್ಯವಸ್ಥಾಪಕರು ಹಾಗೂ ಸಿಬ್ಬಂದಿವರ್ಗದವರು

**ಸರ್ವರಿಗೂ ಆದರದ ಸುಸ್ವಾಗತ ಬಯಸುವವರು**

ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕ ಮಂಡಲಿ, ವ್ಯವಸ್ಥಾಪನ ಮಂಡಲಿ ಸದಸ್ಯರುಗಳು ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗದವರು.
ಆಡಳಿತ ಕಛೇರಿ : # 120, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ – 577 001
ದೂರವಾಣಿ : 08192–272802, 276092, 275032 ಫ್ಯಾಕ್ಸ್ : 91–8192–276329
ಮುಧೋಳ ಶಾಖೆ ದೂರವಾಣಿ : 08350–200356
e-mail: bcb@bcbank.co.in website: bapujicoopbank.com

KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas